☞ ಹಾವೇರಿ
☞ ಗದಗ
☞ ಧಾರವಾಡ
☞ ದಾವಣಗೆರೆ
☞ ಚಿತ್ರದುರ್ಗ
☞ ವಿಜಯನಗರ
☞ ಶಿವಮೊಗ್ಗ
☞ ಬಳ್ಳಾರಿ

ಸುದ್ದಿ, ಫೋಟೋ ಹಾಗೂ ಜಾಹೀರಾತುಗಳಿಗೆ ಸಂಪರ್ಕಿಸಿ : 9480410207

ಪಾಂಡವ

PANDAVA Regional Kannada News Paper ಪ್ರಾದೇಶಿಕ ಕನ್ನಡ ದಿನಪತ್ರಿಕೆ

ಪತ್ರಿಕೆ, ಜಾಹೀರಾತು ಇಸ್ತಿಯಾರನಾಮೆಗಳಿಗಾಗಿ ಸಂಪರ್ಕಿಸಿ : ಮೊಬೈಲ್ ನಂ. : 9742789207 7411679202

* Volume : XVII * Issue : 085 * TUESDAY 24, NOVEMBER 2026 * Editor : S.T. VEDAMURTHY * Page : 6 * Rs : 2.50 * RNI No. KARKAN/2011/39005 * PMG/KA/NK/HVR-028/2026-28 * pandavarnr@gmail.com * Mob No.: 9742789207

ಪ್ರಮುಖ ಸಂಕ್ಷಿಪ್ತ ಸುದ್ದಿ

ಡಿ. 1 ರಂದು ಕಾರ್ತಿಕೋತ್ಸವ

ಪಾಂಡವ ನ್ಯೂಸ್, ರಾಣೇಬೆನ್ನೂರ: ನಗರದ ಹಲಗೇರಿ ರಸ್ತೆಯಲ್ಲಿಯ ಬೀರೇಶ್ವರ ನಗರದ ವೀರಭದ್ರೇಶ್ವರ ದೇವಸ್ಥಾನದಲ್ಲಿ ಗುಗ್ಗಳ ಹಾಗೂ ಕಾರ್ತಿಕೋತ್ಸವ ಡಿ. 1 ರ ಮಂಗಳವಾರ ಜರುಗಲಿದೆ. ಅಂದು ಬೆ. 5.30ಕ್ಕೆ ವೀರಭದ್ರೇಶ್ವರನಿಗೆ ರುದ್ರಾಭಿಷೇಕ ಅಷ್ಟೋತ್ತರ, ವಿಶೇಷ ಪೂಜಾಲಂಕಾರ ಮಹಾ ಮಂಗಳಾರತಿ ಜರುಗುವುದು. ನಂತರ ಬೆ. 8 ಕ್ಕೆ ಗುಗ್ಗಳೋತ್ಸವವು ಪಟ್ಟಣದ ಪ್ರಮುಖ ಬೀದಿಗಳಲ್ಲಿ ಸಂಚರಿಸಿ ಮರಳಿ ದೇವಸ್ಥಾನ ತಲುಪುವುದು. ನಂತರ ಅನ್ನ ಸಂತರ್ಪಣೆ ನೇರವೇರುವುದು. ರಾತ್ರಿ 8ಕ್ಕೆ ಕಾರ್ತಿಕ ದೀಪೋತ್ಸವ. ಹಾಗೂ ಭಜನಾ ಸೇವೆ ಜರಗುವುದು ಎಂದು ದೇವಸ್ಥಾನ ಕಮೀಟಿ ಅಧ್ಯಕ್ಷ ಜಿ. ಬಿ. ಮಾಸಣಗಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಜ್ಞಾನ ವಾಹಿನಿ ಧರ್ಮ ಸಭೆ ಇಂದು

ಪಾಂಡವ ನ್ಯೂಸ್,ರಾಣೇಬೆನ್ನೂರ: ಸ್ಥಳೀಯ ಹೊನ್ನಾಳಿ ಹಿರೇಕಲ್ಮಠದ ಶಾಖಾ ಶ್ರೀ ಚನ್ನೇಶ್ವರ ಮಠದಲ್ಲಿ ಇಂದು ಸಂಜೆ 6 ಕ್ಕೆ ಗೌರಿ ಹುಣ್ಣಿಮೆ ಪ್ರಯುಕ್ತ ಜ್ಞಾನವಾಹಿನಿ ಮಾಸಿಕ ಧರ್ಮ ಸಭೆ ಜರುಗುವುದು

ಹೊನ್ನಾಳಿ ಹಿರೇಕಲ್ಮಠದ ಪೂಜ್ಯ ಒಡೆಯರ ಚನ್ನಮಲ್ಲಿಕಾರ್ಜುನ ಸ್ವಾಮೀಜಿ, ಕೊಡಿಯಾಲ ಹೊಸಪೇಟೆಯ ಪುಣ್ಯಕೋಟಿಮಠದ ಬಾಲಯೋಗಿ ಜಗದೀಶ್ವರ ಸ್ವಾಮೀಜಿ ಸಾನ್ನಿಧ್ಯವಹಿಸುವರು. ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತ ವಾಸಣ್ಣಕುಸಗೂರ., ಸೇವಾರತ್ನ ಪುರಸ್ಕೃತ ಡಾ. ಶೇಖರಗೌಡ ಪಾಟೀಲ, ನ್ಯಾಯವಾದಿ ವಿಠಲ ಪುಟಾಣಿಕರ, ಅತಿಥಿಗಳಾಗಿ ಆಗಮಿಸಲಿದ್ದಾರೆ. ಇದೇ ಸಂದರ್ಭದಲ್ಲಿ ಕದಳಿ ಮಹಿಳಾವೇದಿಕೆ, ಹಾಗೂ ದಾನೇಶ್ವರಿ ಅಕ್ಕನಬಳಗವತಿಯಿಂದ ಗೌರಿ ಹುಣ್ಣಿಮೆ ಪ್ರಯುಕ್ತ ಗೌರಿ ಪ್ರತಿಷ್ಠಾಪನೆ ಮಾಡಿ ಮುತದೆಯರಿಗೆ ಉಡಿ ತುಂಬುವ ಕಾರ್ಯಕ್ರಮ ಜರುಗಲಿದೆ. ಎಂದು ಸೇವಾ ಸಮಿತಿಯವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಇಂದು ಮಿನಿ ಉದ್ಯೋಗ ಮೇಳ

ಪಾಂಡವ ನ್ಯೂಸ್,ಹಾವೇರಿ: ಜಿಲ್ಲಾ ಉದ್ಯೋಗ ವಿನಿಮಯ ಕಚೇರಿ ವತಿಯಿಂದ ಮಿನಿ ಉದ್ಯೋಗ ಮೇಳವನ್ನು ನ. 24 ರ ಮಂಗಳವಾರ ದಂದು ಬೆ. 10.30 ಕ್ಕೆ ಜಿಲ್ಲಾ ವಿನಿಮಯ ಉದ್ಯೋಗ ಕಚೇರಿಯಲ್ಲಿ ಆಯೋಜಿಸಲಾಗಿದೆ. ವಿವಿಧ ಖಾಸಗಿ ಕಂಪನಿಗಳಲ್ಲಿ ಖಾಲಿ ಮಇರುವ ಹುದ್ದೆಗಳಿಗೆ ನೇರ ಸಂದರ್ಶನ ಮೂಲಕ ಭರ್ತಿ ಮಾಡಿಕೊಳ್ಳಲಾಗುತ್ತಿದೆ. ಈಮೇಳದಲ್ಲಿ10 ನೇ ತರಗತಿ, ಐಟಿಐ,ಪಿಯುಸಿ, ಡಿಪ್ಲೋಮ,ಯಾವುದೇ ವಿಷಯದಲ್ಲಿ ಪದವಿ,ವಿದ್ಯಾರ್ಹತೆ ಹೊಂದಿದ ಪುರುಷ ಹಾಗೂ ಮಹಿಳಾ ಉದ್ಯೋಗಾಕಾಂಕ್ಷಿಗಳಿಗೆ ಈ ಮಿನಿ ಉದ್ಯೋಗ ಮೇಳದಲ್ಲಿ ಭಾಗವಹಿಸಬಹುದಾಗಿದೆ. ಆಕಾಂಕ್ಷಿಗಳು ತಮ್ಮ ದಾಖಲಾತಿಗಳೊಂದಿಗೆ, ಆಧಾರ್ ಕಾರ್ಡ್, ಝರಾಕ್ಸ ಪ್ರತಿಯೊಂದಿಗಿ ಕಡ್ಡಾಯವಾಗಿ ನೋಂದಾಯಿಸಿಕೊಂಡು ಹಾಜರಾಗಬೇಕು. ಹೆಚ್ಚಿನ ಮಾಹಿತಿಗಾಗಿ ದೂ.08375_249291,8748981288, 9019317247 ಸಂಪರ್ಕಿಸಬಹುದು.

ವಿಜಯಲಕ್ಷ್ಮೀಗೆ ಪಿಎಚ್‌ಡಿ ಪ್ರಧಾನ



ಪಾಂಡವ ನ್ಯೂಸ್, ರಾಣೇಬೆನ್ನೂರ : ಪಟ್ಟಣದ ರಾಜರಾಜೇಶ್ವರಿ ನಗರದ ವಿಜಯಲಕ್ಷ್ಮೀ ಕೋರಧಾನ್ಯಮಠ ಅವರಿಗೆ ಮಸೂರು ವಿಶ್ವವಿದ್ಯಾಲಯವು ಪಿಎಚ್ ಡಿ ಪದವಿ ಪ್ರಧಾನ ಮಾಡಿದೆ. ಡಾ. ಜಿ. ಎಂ. ಮಮತಾ ಮಾರ್ಗದರ್ಶನದಲ್ಲಿ ಜುಡಿಷಿಯಲ್ ಆಕ್ಟಿವಿಸ್ ರಿಲೇಟೆಡ್ ಟು ಎನ್ವಿರಾನ್ ಮೆಂಟಲ್ ಲಾ ಇನ್ ಇಂಡಿಯಾ ಆಂಡ್ ಅದರ್ ಡವೆಲೆಪಡ್ಡ್ ಕಂಟ್ರೀಸ್ಸ್ ವಿಷಯ ಕುರಿತು ಮಹಾ ಪ್ರಂಬಂಧ ಮಂಡಿಸಿದ್ದರು.

ನ.25ರಂದು ಬೃಹತ್ ರಕ್ತದಾನ ಶಿಬಿರ

ಪಾಂಡವ ನ್ಯೂಸ್, ಹಾವೇರಿ : ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಹಾಗೂ ಜಿಲ್ಲಾ ಏಡ್ಸ್ ನಿಯಂತ್ರಣ ಘಟಕದ ವತಿಯಿಂದ ನ.25ರಂದು ಬೆಳಿಗ್ಗೆ 10 ಗಂಟೆಗೆ ಹಾವೇರಿ ನಗರದ ಜಿಲ್ಲಾ ಆರೋಗ್ಯ ಭವನದಲ್ಲಿ ಬೃಹತ್ ರಕ್ತದಾನ ಶಿಬಿರ ಆಯೋಜಿಸಲಾಗಿದೆ. ಜಿಲ್ಲಾ ಏಡ್ಸ್ ನಿಯಂತ್ರಣಾಧಿಕಾರಿ ಈ ವಿಷಯ ತಿಳಿಸಿದ್ದಾರೆ.

ಜವಳಿ ಕ್ಷೇತ್ರದಲ್ಲಿ ಹೆಚ್ಚು ಉದ್ಯೋಗಾವಕಾಶ–ಜವಳಿ ಕೇತ್ರದಲ್ಲಿ ಕರ್ನಾಟಕ ರಾಜ್ಯ 6ನೇ ಸ್ಥಾನದಲ್ಲಿದೆ : ಸಚಿವ ರುದ್ರಪ್ಪ ಲಮಾಣಿ

ಜಿಲ್ಲೆಯಲ್ಲಿ 100 ಎಕರೆ ಪ್ರದೇಶದಲ್ಲಿ ಟೆಕ್ಸ್‌ಟೈಲ್ ಪಾರ್ಕ್ ಸ್ಥಾಪನೆ ಉದ್ದೇಶ

ಪಾಂಡವ ನ್ಯೂಸ್, ಹಾವೇರಿ : ಕೃಷಿ ಕ್ಷೇತ್ರದ ನಂತರ ಅತಿ ಹೆಚ್ಚು ಉದ್ಯೋಗಾವಕಾಶ ಕಲ್ಪಿಸುವ ಕ್ಷೇತ್ರ ಜವಳಿ ಉದ್ಯಮವಾಗಿದೆ. ಹಾಗಾಗಿ ಜವಳಿ ಉತ್ಪನ್ನಗಳ ಗುಣಮಟ್ಟ ಹೆಚ್ಚಿಸುವುದರ ಜೊತೆಗೆ ಜಾಗತಿಕ ಮಾರುಕಟ್ಟೆಯಲ್ಲಿ ರಫ್ತಿಗೆ ಹೆಚ್ಚಿನ ಆದ್ಯತೆ ನೀಡಬೇಕಾಗಿದೆ ಎಂದು ಜವಳಿ, ಸಕ್ಕರೆ ಹಾಗೂ ಹಾವೇರಿ ಜಿಲ್ಲಾ ಉಸ್ತುವಾರಿ ಸಚಿವ ರುದ್ರಪ್ಪ ಲಮಾಣಿ ಹೇಳಿದರು.

ನಗರದ ಜಿ.ಎಚ್. ಕಾಲೇಜ್ ಸಭಾಂಗಣದಲ್ಲಿ ಸೋಮವಾರ ಕೈಮಗ್ಗ ಮತ್ತು ಜವಳಿ ಇಲಾಖೆ, ಜಿಲ್ಲಾ ಪಂಚಾಯಿತಿ ಹಾಗೂ ಕಾಲೇಜಿನ ವಾಣಿಜ್ಯ ವಿಭಾಗದ ಸಹಯೋಗದಲ್ಲಿ ಜರುಗಿದ 'ಜಾಗತಿಕ ಮಾರುಕಟ್ಟೆಗೆ ಜವಳಿ' ಜವಳಿ ಉತ್ಪನ್ನಗಳ ರಫ್ತು ಕುರಿತ ಒಂದು ದಿನದ ಕಾರ್ಯಾಗಾರ ಉದ್ಘಾಟಿಸಿ ಅವರು ಮಾತನಾಡಿದರು. ಕೈಮಗ್ಗ ಮತ್ತು ಜವಳಿ ಉದ್ಯಮ ದೇಶದಲ್ಲಿ ಮಾತ್ರವಲ್ಲ, ಜಾಗತಿಕ ಮಟ್ಟದಲ್ಲಿಯೂ ಜವಳಿ ಉದ್ಯಮಕ್ಕೆ ಮಹತ್ವದ ಸ್ಥಾನವಿದೆ. ಹಿಂದೆ ಬೇರೆ ದೇಶಗಳಿಂದ ಬಟ್ಟೆಗಳನ್ನು ಆಮದು ಮಾಡಿಕೊಳ್ಳಲಾಗುತ್ತಿತ್ತು. ಆದರೆ ಈಗ ಆಮದು ಪ್ರಮಾಣ ಕಡಿಮೆಯಾಗಿದ್ದು, ಭಾರತದಿಂದ ಹೆಚ್ಚಿನ ಪ್ರಮಾಣದಲ್ಲಿ ಜವಳಿ ಉತ್ಪನ್ನಗಳನ್ನು ವಿದೇಶಗಳಿಗೆ ರಫ್ತು ಮಾಡಲಾಗುತ್ತಿದೆ. ಜವಳಿ ಕ್ಷೇತ್ರದಲ್ಲಿ ಕರ್ನಾಟಕ ದೇಶದಲ್ಲಿಯೇ ಆರನೇ ಸ್ಥಾನದಲ್ಲಿದೆ. ಈ ಕ್ಷೇತ್ರದಲ್ಲಿ ಇನ್ನಷ್ಟು ಪ್ರಗತಿ ಸಾಧಿಸಲು ಜಾಗತಿಕ ಮಾರುಕಟ್ಟೆಯ



ಬೇಡಿಕೆ, ಉತ್ಪನ್ನಗಳ ಗುಣಮಟ್ಟ, ವಿನ್ಯಾಸ ಹಾಗೂ ರಫ್ತು ಪ್ರಕ್ರಿಯೆಗಳ ಬಗ್ಗೆ ನೇಕಾರರು ಮತ್ತು ಉದ್ಯಮಿಗಳಿಗೆ ಅರಿವು ಮೂಡಿಸುವುದು ಅಗತ್ಯವಾಗಿದೆ. ಈ ನಿಟ್ಟಿನಲ್ಲಿ ಇಂತಹ ಕಾರ್ಯಾಗಾರ ಆಯೋಜಿಸಿರುವುದು ಶ್ಲಾಘನೀಯ ಎಂದರು. ಆಧುನಿಕತೆಯಿಂದ ನೇಕರರ ಸಂಖ್ಯೆ ಕ್ಷೀಣಿಸುತ್ತಿದೆ, ನೇಕಾರರ ಇಂದಿನ ಪರಿಸ್ಥಿತಿ ಗಂಭೀರವಾಗಿರುವುದು ಸರ್ಕಾರದ ಗಮನದಲ್ಲಿದೆ. ನೇಕಾರರ ಆರ್ಥಿಕ ಸ್ಥಿತಿ ಸುಧಾರಿಸಿ ಅವರನ್ನು ಸಮಾಜದ ಮುಖ್ಯವಾಹಿನಿಗೆ ತರಲು ಸರ್ಕಾರ ವಿವಿಧ ಸಬ್ಸಿಡಿ ಹಾಗೂ ರಿಯಾಯಿತಿ ಯೋಜನೆಗಳನ್ನು ಜಾರಿಗೊಳಿಸಿದೆ. ವೈಜ್ಞಾನಿಕವಾಗಿ ವೇಗವಾಗಿ ಬೆಳೆಯುತ್ತಿರುವ ಜಗತ್ತಿನೊಂದಿಗೆ ನಾವೂ ಹೆಜ್ಜೆ ಹಾಕಬೇಕಿದೆ. ಜವಳಿ ನೀತಿಯ ಕುರಿತು ಸಂಪೂರ್ಣ ಮಾಹಿತಿ ನೀಡುವ ಉದ್ದೇಶದಿಂದ ಶೀಘ್ರದಲ್ಲಿಯೇ ವಿಧಾನಸೌಧದಲ್ಲಿ ವಿಶೇಷ ಕಾರ್ಯಾಗಾರ ಆಯೋಜಿಸುವ ಚಿಂತನೆಯೂ ಇದೆ ಎಂದು ಹೇಳಿದರು.

100 ಎಕರೆ ಪ್ರದೇಶದಲ್ಲಿ ಟೆಕ್ಸ್‌ಟೈಲ್ ಪಾರ್ಕ್: ಹಾವೇರಿ ಜಿಲ್ಲೆಯಲ್ಲಿ ಜವಳಿ ಉದ್ಯಮದ ಬೆಳವಣಿಗೆಗೆ ವಿಶೇಷ ಆದ್ಯತೆ ನೀಡುವ ಉದ್ದೇಶ ಹೊಂದಲಾಗಿದೆ. ಈ ಹಿಂದೆ ಹನುಮನಮಟ್ಟಿಯಲ್ಲಿ 16 ಎಕರೆ ಜಾಗ ಗುರುತಿಸಲಾಗಿತ್ತು. ಇದೀಗ ತುಮ್ಮಿನಕಟ್ಟಿಯಲ್ಲಿ 16 ಎಕರೆ ಜಾಗ ಗುರುತಿಸಿ ಜವಳಿ ಉದ್ಯಮಕ್ಕೆ ಉತ್ತೇಜನ ನೀಡಲು ಉದ್ದೇಶಿಸಲಾಗಿದೆ. ಕೇಂದ ಸರ್ಕಾರದ ಶೇ.60 ಹಾಗೂ ರಾಜ್ಯ ಸರ್ಕಾರ ಶೇ.40ರ ಸಹಭಾಗಿತ್ವದಲ್ಲಿ ಎರಡೂ ಕಡೆಗಳಲ್ಲಿಯೂ ಅಭಿವೃದ್ಧಿ ಕಾರ್ಯ ಕೈಗೊಳ್ಳುವ ಚಿಂತನೆ ಮಾಡಲಾಗುತ್ತಿದೆ ಎಂದು ಹೇಳಿದರು.

ನನ್ನ ಅವಧಿಯಲ್ಲಿ ಜಿಲ್ಲೆಯಲ್ಲಿ ಜವಳಿ ಇಲಾಖೆಯ ಅಡಿಯಲ್ಲಿ 100 ಎಕರೆ ವಿಸ್ತೀರ್ಣದಲ್ಲಿ ಟೆಕ್ಸ್‌ಟೈಲ್ ಪಾರ್ಕ್ ಸ್ಥಾಪಿಸುವ ಗುರಿ ಹೊಂದಿದ್ದೇನೆ. ಕೋಳೂರ–ಗಣ–ಜೂರು ಕೈಗಾರಿಕಾ ಪ್ರದೇಶದಲ್ಲಿ 407 ಎಕರೆ ಅಭಿವೃದ್ಧಿ ಪಡಿಸಲಾಗುತ್ತಿದೆ. ಈ ಪ್ರದೇಶದಲ್ಲಿ 100 ಎಕರೆ ಟೆಕ್ಸ್‌ಟೈಲ್‌ಗೆ ಕಾಯ್ದಿರಿಸಲಾಗಿದೆ. ಯಾರಾದರೂ ಜವಳಿ ಉದ್ಯಮ ಸ್ಥಾಪನೆಗೆ ಮುಂದೆ ಬಂದರೆ ಜಾಗ ನೀಡಲಾಗುವುದು ಎಂದರು.ಕಳೆದ ಬಜೆಟ್‌ನಲ್ಲಿ ರೇಷ್ಮೆ ಇಲಾಖೆಯ ಸಹಯೋಗದೊಂದಿಗೆ ಜವಳಿ ಪಾರ್ಕ್ ಸ್ಥಾಪನೆ ಕುರಿತು ಘೋಷಣೆಯಾಗಿದೆ. ತುಮ್ಮಿನಕಟ್ಟಿಯಲ್ಲಿ ತಯಾರಾಗುವ ದೇವರ ವಸ್ತ್ರ ಹಾಗೂ ನೀರು ಪಂಚೆಗಳಿಗೆ ಬಹಳ ಬೇಡಿಕೆಯಿದ್ದು, ಇವುಗಳಿಗೆ ಹೆಚ್ಚಿನ ಉತ್ತೇಜನ ನೀಡಲಾಗುವುದು. ಶೀಘ್ರದಲ್ಲಿ ಶಿಗ್ಗಾವಿ ಟೆಕ್ಸ್‌ಟೈಲ್ ಪಾರ್ಕ್‌ಗೆ ನಾನು ಹಾಗೂ ಅಲ್ಲಿನ ಸ್ಥಳೀಯ ಶಾಸಕರು ಭೇಟಿ ನೀಡಿ, ಅಲ್ಲಿನ ವ್ಯವಸ್ಥೆ ಕುರಿತು ಪರಿಶೀಲನೆ ನಡೆಸಲಾಗುವುದು ಎಂದರು.

2ನೇ ಪುಟಕ್ಕೆ ▶▶▶

ಆಟೋ ಚಾಲಕರಿಂದ ಶಾಸಕ ಬಸವರಾಜ ಶಿವಣ್ಣನವರಿಗೆ ಮನವಿ

ಪಾಂಡವ ನ್ಯೂಸ್, ಬ್ಯಾಡಗಿ : ಪಟ್ಟಣದ ಆಟೋ ಚಾಲಕರು ಹಾಗೂ ಮಾಲೀಕರ ಸಮಸ್ಯೆಗಳಿಗೆ ಪರಿಹಾರ ಕಲ್ಪಿಸಿ, ಅಗತ್ಯ ಮೂಲಸೌಕರ್ಯ ಒದಗಿಸಬೇಕು ಎಂದು ಶಾಸಕ ಬಸವರಾಜ ಶಿವಣ್ಣನವರಿಗೆ ಮನವಿ ಸಲ್ಲಿಸಲಾಯಿತು.

ಪಟ್ಟಣದ ಶ್ರೀ ಅಟಲ್ ಬಿಹಾರಿ ವಾಜಪೇಯಿ ಆಟೋ ನಿಲ್ದಾಣಕ್ಕೆ ಶಾಸಕರು ಭೇಟಿ ನೀಡಿದ ಸಂದರ್ಭದಲ್ಲಿ, ಆಟೋ ಚಾಲಕರು ಹಾಗೂ ಮಾಲೀಕರ ವತಿಯಿಂದ ಅವರನ್ನು ಆತ್ಮೀಯವಾಗಿ ಸ್ವಾಗತಿಸಲಾಯಿತು. ಈ ವೇಳೆ ಭೀಮ್ ರಾಜ್ಯ ದಲಿತ ಸೇವಾ ಸಮಿತಿ (ರಿ), ಬೆಂಗಳೂರು–ಹಾವೇರಿ ಜಿಲ್ಲಾ ಘಟಕದ ವತಿಯಿಂದ ಚಂದ್ರಶೇಖರ್ ಪರಶುರಾಮ್ ಗದಗಕರ ಅವರು ಚಾಲಕರು ಮತ್ತು ಮಾಲೀಕರ ಪರವಾಗಿ ಮನವಿ ಸಲ್ಲಿಸಿದರು.

ಬ್ಯಾಡಗಿ ಪಟ್ಟಣದ ಆಟೋ ಚಾಲಕರಿಗೆ ಅಗತ್ಯ ಮೂಲಭೂತ ಸೌಕರ್ಯಗಳನ್ನು ಕಲ್ಪಿಸಬೇಕು. ಚಾಲನಾ ಪರವಾನಗಿ (ಡಿಎಲ್) ಸಂಬಂಧಿತ



ಸೌಲಭ್ಯಗಳನ್ನು ಒದಗಿಸಬೇಕು. ಪಟ್ಟಣದ ಪ್ರತಿಯೊಂದು ಆಟೋ ನಿಲ್ದಾಣಕ್ಕೂ ಪ್ರತ್ಯೇಕ ಮೇಲ್ಚಾವಣಿ ವ್ಯವಸ್ಥೆ ನಿರ್ಮಿಸಬೇಕು.

ಆಟೋ ಚಾಲಕರು ಹಾಗೂ ಮಾಲೀಕರಿಗೆ ಅನುಕೂಲವಾಗುವ ಅಗತ್ಯ ಸೌಲಭ್ಯಗಳನ್ನು ಒದಗಿಸಬೇಕು ಎಂದು ಮನವಿಯಲ್ಲಿ ಒತ್ತಾಯಿಸಲಾಗಿದೆ.

ಕೆಲವು ತಿಂಗಳ ಹಿಂದೆ ಇದೇ ಸಮಸ್ಯೆಗಳ ಕುರಿತು ಶಾಸಕರಿಗೆ ಮನವಿ ಸಲ್ಲಿಸಲಾಗಿತ್ತು. ಇದೀಗ ಮತ್ತೊಮ್ಮೆ ಶಾಸಕರನ್ನು ಭೇಟಿ ಮಾಡಿದ ಚಂದ್ರಶೇಖರ್ ಪರಶುರಾಮ್ ಗದಗಕರ, ಪಟ್ಟಣದ ಸಮಸ್ತ ಆಟೋ ಚಾಲಕರು ಮತ್ತು ಮಾಲೀಕರ ಪರವಾಗಿ ಬೇಡಿಕೆಗಳನ್ನು ಮುಂದಿಟ್ಟರು. ಮುಖ್ಯಮಂತ್ರಿಗಳ ವಿಶೇಷ ನಿಧಿ ಅಥವಾ ಸೂಕ್ತ ಸರ್ಕಾರಿ

2ನೇ ಪುಟಕ್ಕೆ ▶▶▶

ವಿದ್ಯಾರ್ಥಿ ಕವಿಗಳ ಕಲ್ಪನೆಗೆ 'ಅರಿವಿನ ಬೆನ್ನೇರಿ' ವೇದಿಕೆ



ಪಾಂಡವ ನ್ಯೂಸ್, ರಾಣೇಬೆನ್ನೂರು : ಪಠ್ಯಪುಸ್ತಕಗಳ ಚೌಕಟ್ಟಿನಿಂದ ಹೊರಬಂದು, ಸುತ್ತಲಿನ ಜಗತ್ತನ್ನು ಕಾವ್ಯದ ಮೂಲಕ ಗ್ರಹಿಸುವ ಪ್ರಯತ್ನ. ಪ್ರಕೃತಿ, ಸಮಾಜ, ಮಾನವೀಯ ಮೌಲ್ಯಗಳ ಕುರಿತು ವಿದ್ಯಾರ್ಥಿಗಳ ಸಂವೇದನೆಗೆ ವೇದಿಕೆ ಕಲ್ಪಿಸಿದ ಅಪರೂಪದ ಕಾರ್ಯಕ್ರಮಕ್ಕೆ ಜೋಯಿಸರಹರಳಹಳ್ಳಿಯ ಸರ್ಕಾರಿ ಪ್ರೌಢಶಾಲೆ ಸಾಕ್ಷಿಯಾಯಿತು.

ರಾಣೇಬೆನ್ನೂರಿನ ಕಾಗದ ಸಾಂಗತ್ಯ ಸಾಂಸ್ಕೃತಿಕ ವೇದಿಕೆ ಹಾಗೂ ಜೋಯಿಸರಹರಳಹಳ್ಳಿಯ ಸರ್ಕಾರಿ ಪ್ರೌಢಶಾಲೆ ಮತ್ತು ಪಿಯು ಕಾಲೇಜಿನ ಸಂಯುಕ್ತಾಶ್ರಯದಲ್ಲಿ ಆಯೋಜಿಸಿದ್ದ 'ಅರಿವಿನ ಬೆನ್ನೇರಿ' ವಿದ್ಯಾರ್ಥಿ ಕವಿಗೋಷ್ಠಿ ಹಾಗೂ ಸಂವಾದ ಕಾರ್ಯಕ್ರಮದಲ್ಲಿ 17 ವಿದ್ಯಾರ್ಥಿ ಕವಿಗಳು ಸ್ವರಚಿತ ಕವನಗಳನ್ನು ವಾಚಿಸಿ ಗಮನ ಸೆಳೆದರು.

ಕಾರ್ಯಕ್ರಮದ ಪರಿಕಲ್ಪನೆ ರೂಪಿಸಿ, ವಿದ್ಯಾರ್ಥಿಗಳೊಂದಿಗೆ ಸಂವಾದ ನಡೆಸಿದ ಬರಹಗಾರ, ಕಲಾವಿದ ಹಾಗೂ ವನ್ಯಜೀವಿ ಛಾಯಾಗ್ರಾಹಕ ನಾಮದೇವ ಕಾಗದಗಾರ ಮಾತನಾಡಿ, ಪ್ರಕೃತಿ ಮತ್ತು ಸಮಾಜವನ್ನು ಸೂಕ್ಷ್ಮವಾಗಿ ಗಮನಿಸುವ ಗುಣ ಬೆಳೆಸಿಕೊಂಡಾಗ ಉತ್ತಮ ಕಾವ್ಯ ಹುಟ್ಟಲು ಸಾಧ್ಯ. ಪಠ್ಯಪುಸ್ತಕಗಳಾಚೆಗಿನ ಜಗತ್ತನ್ನು ಪ್ರಶ್ನಿಸುವ ಹಾಗೂ ಗ್ರಹಿಸುವ ಮನೋಭಾವ ವಿದ್ಯಾರ್ಥಿಗಳಲ್ಲಿ ಬೆಳೆಯಬೇಕು ಎಂದು ಹೇಳಿದರು.

ಕವನ ರಚನೆಯ ತಯಾರಿ, ಪದಗಳ ಆಯ್ಕೆ ಮತ್ತು ಭಾವನೆಗಳ ಅಭಿವ್ಯಕ್ತಿಯ ಕುರಿತು ವಿದ್ಯಾರ್ಥಿಗಳೊಂದಿಗೆ ನಡೆಸಿದ ಸಂವಾದ ಗಮನ ಸೆಳೆಯಿತು.

ಬೆಳಗಾವಿ ಕಾರಂಜಿಮಠದ ಡಾ. ಶಿವಯೋಗಿ ದೇವರು ಆಶೀರ್ವಚನ ನೀಡಿ, ವಿದ್ಯಾರ್ಥಿ ದೆಸೆಯಲ್ಲಿಯೇ ಸಾಹಿತ್ಯ ಮತ್ತು ಕಾವ್ಯದ ಅಭಿರುಚಿ ಬೆಳೆಸಿಕೊಳ್ಳುವುದರಿಂದ ಮನಸ್ಸು ಪ್ರಬುದ್ಧವಾಗುತ್ತದೆ.

4ನೇ ಪುಟಕ್ಕೆ ▶▶▶

ಬಸವ ಮಂಟಪ ಪುಸ್ತಕದಲ್ಲಿನ ಉಲ್ಲೇಖಕ್ಕೆ ರುದ್ರಪ್ಪ ಲಮಾಣಿ ಆಕ್ರೋಶ



ಪಾಂಡವ ನ್ಯೂಸ್, ಹಾವೇರಿ : ವಿಶ್ವಗುರು ಬಸವಣ್ಣನವರ ಕುರಿತು 'ಬಸವ ಮಂಟಪ' ಪುಸ್ತಕದಲ್ಲಿ ಅವಹೇಳನಕಾರಿಯಾಗಿ ಉಲ್ಲೇಖಿಸಿರುವುದು ಖಂಡನೀಯ ಎಂದು ಸಚಿವ ರುದ್ರಪ್ಪ ಲಮಾಣಿ ಆಕ್ರೋಶ ವ್ಯಕ್ತಪಡಿಸಿದರು. ಭಾನುವಾರ ನಗರದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಬಸವಣ್ಣನವರ ಕುರಿತ ಪುಸ್ತಕದ ವಿವಾದ ಸೋಮವಾರ ನಡೆದ ಸಚಿವ ಸಂಪುಟ ಸಭೆಯಲ್ಲೂ ಚರ್ಚೆಯಾಗಿದೆ. ಸಿದ್ಧಾಂತಗಳ ಬಗ್ಗೆ ಭಿನ್ನಾಭಿಪ್ರಾಯಗಳಿರುವುದು ಸಹಜ. ಅದನ್ನು ಒಪ್ಪಿಕೊಳ್ಳಬಹುದು. ಆದರೆ ಬಸವಣ್ಣನವರ ವ್ಯಕ್ತಿತ್ವದ ಬಗ್ಗೆ ಅವಹೇಳನಕಾರಿಯಾಗಿ ಮಾತನಾಡುವುದು ಸರಿಯಲ್ಲ ಎಂದರು."ನಾವ್ಯಾರೂ ಬಸವಣ್ಣನವರ ಕಾಲದಲ್ಲಿ ಹುಟ್ಟಿದವರಲ್ಲ. ಅವರು ವಿಶ್ವನಾಯಕರೆ ಅಥವಾ ಅಲ್ಲವೇ ಎಂಬ ಚರ್ಚೆ ಬೇರೆ. ಆದರೆ ಬಸವಣ್ಣನವರ ಬಗ್ಗೆ ಈ ರೀತಿಯ ಕೀಳಾಗಿ ಮಾತನಾಡಿರುವುದನ್ನು ಈವರೆಗೆ ಕೇಳಿಲ್ಲ. ಮಾನವ ಕುಲಕ್ಕೆ ಬಸವಣ್ಣನವರ ಕೊಡುಗೆ ಅಪಾರ. ಅವರನ್ನು ವಿಶ್ವಗುರು ಎಂದು ಗೌರವಿಸುತ್ತೇವೆ. ಜಗತ್ತಿಗೆ ಸಂವಿಧಾನದ ಪರಿಕಲ್ಪನೆಯನ್ನು ಪರಿಚಯಿಸಿದ ಮಹಾನ್ ನಾಯಕ ಬಸವಣ್ಣನವರು," ಎಂದು ಹೇಳಿದರು.ಬಸವಣ್ಣನವರ ಸಿದ್ಧಾಂತಗಳ ಆಧಾರದಲ್ಲಿ ಮಠಮಾನ್ಯಗಳು ಹಾಗೂ ಸಮಾಜದಲ್ಲಿ ಸಾಕಷ್ಟು ಸುಧಾರಣೆಗಳಾಗಿವೆ. ಸುಮಾರು 800 ವರ್ಷಗಳ ಹಿಂದೆ ಬದುಕಿದ್ದ ಬಸವಣ್ಣನವರ ಕುರಿತು ಈಗಿನವರು ಮನಬಂದಂತೆ ಊಹಾಪೋಹಗಳನ್ನು ವ್ಯಕ್ತಪಡಿಸುವುದು ಎಷ್

ಮೊದಲ ಪುಟದಿಂದ.....

ಜಿಲ್ಲೆಯಲ್ಲಿ 100 ಎಕರೆ ಪ್ರದೇಶದಲ್ಲಿ.....

ಜಿಲ್ಲೆಯಲ್ಲಿ 600 ಕೈಮಗ್ಗಗಳು ಹಾಗೂ 500ಕ್ಕೂ ಹೆಚ್ಚು ವಿದ್ಯುತ್ ಮಗ್ಗಗಳು ಹಾಗೂ 15ಸಿದ್ದ ಉಡುಪು ಘಟಕಗಳು ಕಾರ್ಯನಿರ್ವಹಿಸುತ್ತಿರುವುದು ಸಂತಸದ ಸಂಗತಿ. ಅಂದಾಜು ಆರು ಸಾವಿರ ಜನರಿಗೆ ಉದ್ಯೋಗಾವಕಾಶ ದೊರೆತಿದೆ. ಬರುವ ದಿನಗಳಲ್ಲಿ ಜಿಲ್ಲೆಯಲ್ಲಿ ಹತ್ತಿ ಉತ್ಪಾದನೆಗೂ ಹೆಚ್ಚಿನ ಪ್ರೋತ್ಸಾಹ ನೀಡಲಾಗುವುದು. ಜವಳಿ ಇಲಾಖೆಯಲ್ಲಿ ಖಾಲಿ ಇರುವ ಹುದ್ದೆಗಳ ಭರ್ತಿಗೆ ಕ್ರಮ ಕೈಗೊಳ್ಳಲಾಗುವುದು. ಜಿಐ ಟ್ಯಾಗ್ ಹಾಗೂ ಜಾಗತಿಕ ಹೂಡಿಕೆಗೆ ಹೆಚ್ಚಿನ ಆದ್ಯತೆ ನೀಡುವ ಅಗತ್ಯವಿದೆ ಎಂದು ಹೇಳಿದರು.ನೇಕಾರರು ತಯಾರಿಸುವ ಜವಳಿ ಉತ್ಪನ್ನಗಳನ್ನು ಶಾಲಾ ಮಕ್ಕಳಿಗೆ ವಿತರಣೆಗೆ ಚಿಂತನೆ ಮಾಡಲಾಗಿದೆ. ನೇಕಾರರ ಸಮಸ್ಯೆಗಳ ಬಗ್ಗೆ ಸರ್ಕಾರಕ್ಕೆ ಅರಿವಿದ್ದು, ಮುಖ್ಯಮಂತ್ರಿ ಅವರೂ ಈ ಬಗ್ಗೆ ವಿಶೇಷ ಆಸಕ್ತಿ ಹೊಂದಿದ್ದಾರೆ. ಶೀಘ್ರದಲ್ಲಿಯೇ ನೇಕಾರರ ಸಮಸ್ಯೆಗಳನ್ನು ಬಗೆಹರಿಸಲು ಕ್ರಮ ಕೈಗೊಳ್ಳಲಾಗುವುದು ಎಂದು ಭರವಸೆ ನೀಡಿದರು. ಧಾರವಾಡ ಕೇಂದ್ರೀಯ ರೇಷ್ಮೆ ಮಂಡಳಿಯ ವಿಜ್ಞಾನಿ ಡಾ. ವಿರಾಜ್ ಸೋಮ್ಮುವರ್, ಹಾವೇರಿ ಅಂಚೆ ಅಧೀಕ್ಷಕ ಮಂಜುನಾಥ ಹುಬ್ಬಳ್ಳಿ ಅವರು ಜಾಗತಿಕ ಮಾರುಕಟ್ಟೆಗೆ ಜವಳಿ ಉತ್ಪನ್ನಗಳ ರಫ್ತು ಕುರಿತು ವಿವಿಧ ವಿಷಯಗಳ ಸವಿವರಾದ ಉಪನ್ಯಾಸ ನೀಡಿದರು. ಕಾರ್ಯಕ್ರಮದಲ್ಲಿ ಪ್ರಾಧಿಕಾರ ಅಧ್ಯಕ್ಷ ಪ್ರಭುಗೌಡ ಬಿಷ್ಟನಗೌಡ್ರ, ಗ್ಯಾರಂಟಿ ಸಮಿತಿ ತಾಲೂಕಾಧ್ಯಕ್ಷ ಮೈದೂರ, ಬೆಳಗಾವಿ ಕೈಮಗ್ಗ ಮತ್ತು ಜವಳಿ ಇಲಾಖೆ ಜಂಟಿ ನಿರ್ದೇಶಕ ಡಾ. ಶಿವರಾಜ, ಜಿಲ್ಲಾ ಕೈಗಾರಿಕಾ ಕೇಂದ್ರದ ಜಂಟಿ ನಿರ್ದೇಶಕ ಅಶೋಕ, ಸರ್ಕಾರಿ ನೌಕರರ ಸಂಘದ ಜಿಲ್ಲಾಧ್ಯಕ್ಷ ಮಲ್ಲೇಶಪ್ಪ ಕರಿಗಾರ, ಸಂಜೀವಕುಮಾರ ನೀರಲಗಿ, ನಾರಾಯಣಪ್ಪ ಗಡ್ಡದ ಸೇರಿದಂತೆ ಮತ್ತಿತರರು ಉಪಸ್ಥಿತರಿದ್ದರು. ಕೈಮಗ್ಗ ಮತ್ತು ಜವಳಿ ಇಲಾಖೆ ಉಪನಿರ್ದೇಶಕ ಭೋಜರಾಜ ಕಠಾರಿ ಸ್ವಾಗತಿಸಿದರು. ನಾಗವೇಣಿ ನಿರೂಪಿಸಿದರು.

ಮೊದಲ ಪುಟದಿಂದ.....

ಶಾಸಕ ಬಸವರಾಜ ಶಿವಣ್ಣನವರಿಗೆ....

ಅನುದಾನದ ಮೂಲಕ ಅಗತ್ಯ ಸೌಲಭ್ಯಗಳನ್ನು ಕಲ್ಪಿಸಿಕೊಡಬೇಕು ಎಂದು ಕೋರಿದರು. ಆಟೋ ಚಾಲಕರು ಪ್ರತಿನಿತ್ಯ ಸಾರ್ವಜನಿಕರ ಸೇವೆಯಲ್ಲಿ ತೊಡಗಿಸಿಕೊಂಡಿದ್ದು, ಸಾರಿಗೆ ವ್ಯವಸ್ಥೆಯ ಪ್ರಮುಖ ಭಾಗವಾಗಿದ್ದಾರೆ. ಅವರ ಕೆಲಸಕ್ಕೆ ಅನುಕೂಲವಾಗುವ ಮೂಲಸೌಕರ್ಯಗಳನ್ನು ಒದಗಿಸುವುದು ಅಗತ್ಯವಾಗಿದೆ. ಚಾಲಕರು ಹಾಗೂ ಮಾಲೀಕರ ಸಮಸ್ಯೆಗಳನ್ನು ಗಮನದಲ್ಲಿಟ್ಟುಕೊಂಡು ಸರ್ಕಾರ ಮತ್ತು ಜನಪ್ರತಿನಿಧಿಗಳು ಸೂಕ್ತ ಕ್ರಮ ಕೈಗೊಳ್ಳಬೇಕು ಎಂಬುದು ಮನವಿಯ ಆಶಯವಾಗಿದೆ. ಶಾಸಕರು ಮನವಿಗೆ ಸಕಾರಾತ್ಮಕವಾಗಿ ಸ್ಪಂದಿಸಿ, ಆಟೋ ಚಾಲಕರ ಸಮಸ್ಯೆಗಳಿಗೆ ಪರಿಹಾರ ಕಲ್ಪಿಸುವ ವಿಶ್ವಾಸವಿದೆ ಎಂದು ಮನವಿ ಸಲ್ಲಿಸಿದವರು ತಿಳಿಸಿದರು.

ಮೊದಲ ಪುಟದಿಂದ.....

0000

ಸಂಘಟಕರು ಮನವಿ ಮಾಡಿದ್ದಾರೆ.

ಕರ್ನಾಟಕ ರಾಜ್ಯ ರೈತ ಸಂಘಟನೆಯ ರವೀಂದ್ರಗೌಡ ಎಫ್. ಪಾಟೀಲ, ಸ್ವಾಭಿಮಾನಿ ಕರ್ನಾಟಕ ರಕ್ಷಣಾ ವೇದಿಕೆಯ ರಾಜ್ಯಾಧ್ಯಕ್ಷ ನಿತ್ಯಾನಂದ ಕುಂದಾಪುರ, ಹೆಮ್ಮೆಯ ಕನ್ನಡ ಸಂಘಟನೆಯ ರಾಜ್ಯಾಧ್ಯಕ್ಷ ಈರಣ್ಣ ಕೊಂಡಜ್ಜಿ ಹಾಗೂ ರಕ್ಷಣಾ ವೇದಿಕೆಯ ಗಣೇಶ ಗೊಣೆಮ್ಮನವರ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಗೌರಿ ಹಬ್ಬಕ್ಕೆ ಗುತ್ತಲದ ಸಕ್ಕರೆ ಗೊಂಬೆಗಳೇ ಫೇಮಸ್!



ಪಾಂಡವ ನ್ಯೂಸ್, ಗುತ್ತಲ : ಗೌರಿ ಹುಣ್ಣಿಮೆ ಹತ್ತಿರವಾಗುತ್ತಿದ್ದಂತೆ ಗುತ್ತಲದಲ್ಲಿ ಸಕ್ಕರೆ ಗೊಂಬೆಗಳ ತಯಾರಿ ಚುರುಕುಗೊಂಡಿದೆ.

ಬರಗಾಲದ ಸಂಕಷ್ಟ ಹಾಗೂ ಕಚ್ಚಾವಸ್ತುಗಳ ಬೆಲೆ ಏರಿಕೆಯ ನಡುವೆಯೂ ತಲೆಮಾರುಗಳಿಂದ ನಡೆದು ಬಂದಿರುವ ಈ ಕಾಯಕಕ್ಕೆ ವಿರಾಮವಿಲ್ಲ. ಗೌರಿ ಹಬ್ಬದ ಧಾರ್ಮಿಕ ಆಚರಣೆಗೆ ಸಿಹಿ ಮೆರುಗು ನೀಡುವ ಗುತ್ತಲದ ಸಕ್ಕರೆ ಗೊಂಬೆಗಳಿಗೆ ಹಾವೇರಿ ಮಾತ್ರವಲ್ಲದೆ ಗದಗ, ವಿಜಯನಗರ, ದಾವಣಗೆರೆ ಹಾಗೂ ಧಾರವಾಡ–ಹುಬ್ಬಳ್ಳಿ ಭಾಗಗಳಲ್ಲೂ ಬೇಡಿಕೆಯಿದೆ.

ಶಿವ–ಪಾರ್ವತಿ, ಆನೆ, ಒಂಟೆ, ರಥ, ಮಂಟಪ, ಆಂಜನೇಯ, ಬಸವಣ್ಣ ಸೇರಿದಂತೆ ವಿವಿಧ ವಿನ್ಯಾಸಗಳಲ್ಲಿ ಗೊಂಬೆಗಳನ್ನು ತಯಾರಿಸಲಾಗುತ್ತಿದೆ. ಪೌರಾಣಿಕ ಹಾಗೂ ಸಾಂಪ್ರದಾಯಿಕ ರೂಪಗಳನ್ನು ಸಕ್ಕರೆಯಿಂದ ರೂಪಿಸುವ ತಯಾರಕರ ಕೈಚಳಕ ಹಬ್ಬದ ಸಡಗರಕ್ಕೆ ವಿಶೇಷ ಮೆರುಗು ನೀಡುತ್ತದೆ. ಗುತ್ತಲದಲ್ಲಿ ತಯಾರಾಗುವ ಗೊಂಬೆಗಳನ್ನು ಸಗಟು ದರದಲ್ಲಿ ಮಾರಾಟ ಮಾಡಲಾಗುತ್ತಿದ್ದು, ವಿವಿಧ ಜಿಲ್ಲೆಗಳಿಗೆ ರವಾನಿಸಲಾಗುತ್ತಿದೆ.

ತಂದೆಯ ಕಾಲದಿಂದಲೂ ಸಿಹಿ ಕಾಯಕ : "ನಮ್ಮ ತಂದೆಯವರ ಕಾಲದಿಂದಲೂ ಸಿಹಿ ಪದಾರ್ಥಗಳನ್ನು ತಯಾರಿಸುವ ಕಾಯಕ ಮಾಡಿಕೊಂಡು ಬಂದಿದ್ದೇವೆ. ಗೌರಿ ಹುಣ್ಣಿಮೆಗೆ ವಿಶೇಷವಾಗಿ ಸಕ್ಕರೆ ಗೊಂಬೆಗಳನ್ನು ತಯಾರಿಸುವುದು ನಮ್ಮ ಸಂಪ್ರದಾಯ. ನಾವು ತಯಾರಿಸುವ ಗೊಂಬೆಗಳಿಗೆ ಹಾವೇರಿ ಜಿಲ್ಲೆ ಮಾತ್ರವಲ್ಲದೆ ಗದಗ, ವಿಜಯನಗರ, ದಾವಣಗೆರೆ, ಧಾರವಾಡ–ಹುಬ್ಬಳ್ಳಿ ಭಾಗಗಳಲ್ಲೂ ಬೇಡಿಕೆಯಿದೆ. ಸಗಟು ದರದಲ್ಲಿ ಮಾರಾಟ ಮಾಡುತ್ತೇವೆ. ಯಾವುದೇ ರಾಸಾಯನಿಕ ವಸ್ತುಗಳನ್ನು ಬಳಸದೆ ನೈಸರ್ಗಿಕವಾಗಿ ಗೊಂಬೆಗಳನ್ನು ತಯಾರಿಸುತ್ತೇವೆ," ಎಂದು ತಯಾರಕ ರಾಜೇಸಾಬ್ ನಧಾಪ್ ತಿಳಿಸಿದರು.

ಬೆಲೆ ಏರಿಕೆಯ ಹೊರೆ : ಬರಗಾಲದ ಸಂಕಷ್ಟದ ನಡುವೆ ಕಚ್ಚಾವಸ್ತುಗಳ ಬೆಲೆ ಏರಿಕೆ ತಯಾರಕರಿಗೆ ಹೆಚ್ಚುವರಿ ಹೊರೆ ತಂದಿದೆ. ಸಕ್ಕರೆ ಸೇರಿದಂತೆ ಅಗತ್ಯ ವಸ್ತುಗಳ ಬೆಲೆ ಹೆಚ್ಚಳದಿಂದ ತಯಾರಿಕಾ ವೆಚ್ಚವೂ ಏರಿಕೆಯಾಗಿದೆ. ಆದರೂ ಹಬ್ಬದ ಬೇಡಿಕೆ ಹಾಗೂ ತಲೆಮಾರುಗಳಿಂದ ನಡೆದು ಬಂದಿರುವ ಕಾಯಕದ ಮೇಲಿನ ಬದ್ಧತೆಯಿಂದ ಗೊಂಬೆಗಳ ತಯಾರಿ ಮುಂದುವರಿದಿದೆ.

ಆರತಿಯಲ್ಲಿ ಧಾರ್ಮಿಕತೆ, ಆಚರಣೆಯಲ್ಲಿ ಭಾವೈಕ್ಯತೆ : ಗೌರಿ ಹುಣ್ಣಿಮೆಯಂದು ಗೌರಮ್ಮನಿಗೆ ಸಕ್ಕರೆ ಗೊಂಬೆಗಳಿಂದ ಆರತಿ ಬೆಳಗುವುದು ಉತ್ತರ ಕರ್ನಾಟಕದ ಹಲವು ಮನೆಗಳ ಸಂಪ್ರದಾಯ. ಮನೆಯ ಹೆಣ್ಣುಮಕ್ಕಳಿಗೆ, ಸೊಸೆಯಂದಿರಿಗೆ ದಂಡಿ ಸಕ್ಕರೆ ಗೊಂಬೆ ಆರತಿ ನೀಡಿ ಸಂಭ್ರಮಿಸುವ ಮೂಲಕ ಕುಟುಂಬದ ಬಾಂಧವ್ಯವನ್ನು ಗಟ್ಟಿಗೊಳಿಸಲಾಗುತ್ತದೆ. ಮದುವೆ ನಿಶ್ಚಯವಾದ ವಧುವಿಗೆ ವರನ ಕಡೆಯವರು ಸಕ್ಕರೆ ಗೊಂಬೆ, ಸೀರೆ ಹಾಗೂ ಮಲ್ಲಿಗೆ ಹೂವಿನ ದಂಡಿ ನೀಡುವ ಪದ್ಧತಿಯೂ ಇದೆ.

ಹಬ್ಬದ ಸಂದರ್ಭದಲ್ಲಿ ಮಹಿಳೆಯರು ಪರಸ್ಪರ ಮನೆಗಳಿಗೆ ತೆರಳಿ ಆರತಿ ಬೆಳಗುತ್ತಾರೆ. ಸಂಬಂಧಿಕರು, ನೆರೆಹೊರೆಯವರು ಒಂದೆಡೆ ಸೇರುವ ಈ ಆಚರಣೆ ಧಾರ್ಮಿಕ ನಂಬಿಕೆಯೊಂದಿಗೆ ಆತ್ಮೀಯತೆಯನ್ನೂ ಬೆಸೆಯುತ್ತದೆ. ಸಕ್ಕರೆ ಗೊಂಬೆಗಳ ಸಿಹಿಯಂತೆ ಸಂಬಂಧಗಳಲ್ಲೂ ಸಿಹಿ ತುಂಬುವ ಗೌರಿ ಹುಣ್ಣಿಮೆ, ಉತ್ತರ ಕರ್ನಾಟಕದ ಜನಪದ ಸಂಸ್ಕೃತಿಯ ಜೀವಂತ ಪ್ರತೀಕವಾಗಿದೆ.

ಬರದ ಬಿಸಿ ಮತ್ತು ಬೆಲೆ ಏರಿಕೆಯ ನಡುವೆಯೂ ಗುತ್ತಲದ ತಯಾರಕರು ತಮ್ಮ ಕಾಯಕವನ್ನು ಮುಂದುವರಿಸಿ, ಗೌರಿ ಹಬ್ಬದ ಸಂಪ್ರದಾಯಕ್ಕೆ ಸಿಹಿ ರೂಪ ನೀಡುತ್ತಿದ್ದಾರೆ.

ಬಸವ ಮಂಟಪ' ಪುಸ್ತಕದ ವಿರುದ್ಧ ಆಕ್ರೋಶ

ಲೇಖಕ, ಪ್ರಕಾಶಕರ ಗಡಿಪಾರಿಗೆ ಆಗ್ರಹಿಸಿ ಪ್ರತಿಭಟನೆ



ಪಾಂಡವ ನ್ಯೂಸ್, ರಾಣೆಬೆನ್ನೂರು : ಬಸವಣ್ಣನವರ ಕುರಿತು ಅವಹೇಳನಕಾರಿ ಬರಹಗಳಿವೆ ಎಂದು ಆರೋಪಿಸಿ, 'ಬಸವ ಮಂಟಪ' ಪುಸ್ತಕದ ಲೇಖಕ ರವಿ ಹಂಜಿ ಹಾಗೂ ಪ್ರಕಾಶಕ ವಿಶ್ವೇಶ್ವರ ಭಟ್ ವಿರುದ್ಧ ಕ್ರಮಕ್ಕೆ ಆಗ್ರಹಿಸಿ ಬಸವ ಅಭಿಮಾನಿಗಳು ಸೋಮವಾರ ಪ್ರತಿಭಟನೆ ನಡೆಸಿದರು. ನಗರದ ಮಿನಿ ವಿಧಾನಸೌಧಕ್ಕೆ ತೆರಳಿದ ಪ್ರತಿಭಟನಾಕಾರರು, ತಹಶೀಲ್ದಾರ್ ಮೂಲಕ ಸರ್ಕಾರಕ್ಕೆ ಮನವಿ ಸಲ್ಲಿಸಿದರು.

ಬಸವಣ್ಣನವರ ವಿರುದ್ಧ ಅವಹೇಳನಕಾರಿ ಬರಹಗಳನ್ನು ಪ್ರಕಟಿಸಿರುವುದು ಬಸವ ಅನುಯಾಯಿಗಳ ಭಾವನೆಗಳಿಗೆ ಧಕ್ಕೆ ತಂದಿದೆ. ಲೇಖಕ ಹಾಗೂ ಪ್ರಕಾಶಕರನ್ನು ಭಾರತದಿಂದ ಗಡಿಪಾರು ಮಾಡಬೇಕು. ಪುಸ್ತಕ ಬರೆಯಲು ಪ್ರಚೋದನೆ ನೀಡಿದವರು ಹಾಗೂ ಪ್ರಕಟಣೆಯ ಹಿಂದೆ ಇರುವ ಶಕ್ತಿಗಳನ್ನು ಗುರುತಿಸಿ ಶಿಕ್ಷಿಸಬೇಕು ಎಂದು ಪ್ರತಿಭಟನಾಕಾರರು ಒತ್ತಾಯಿಸಿದರು. ಬಸವಣ್ಣನವರ ವಿಚಾರಧಾರೆಗಳು ಸಮಾನತೆ, ಕಾಯಕ ಮತ್ತು ದಾಸೋಹದ ತತ್ವಗಳನ್ನು ಸಾರುತ್ತವೆ. ಇಂತಹ ಮಹಾನ್ ಶರಣರ ಕುರಿತು ಅವಹೇಳನಕಾರಿ ಬರಹಗಳನ್ನು ಸಹಿಸಲು ಸಾಧ್ಯವಿಲ್ಲ. ಸರ್ಕಾರ ಕೂಡಲೇ ಮಧ್ಯಪ್ರವೇಶಿಸಿ ಸೂಕ್ತ ಕಾನೂನು ಕ್ರಮ ಕೈಗೊಳ್ಳಬೇಕು ಎಂದು ಆಗ್ರಹಿಸಿದರು.

ವಿಶ್ವಗುರು ಬಸವ ಬಳಗ, ಶ್ರೀ ಗುರುಬಸವ ಲಿಂಗಾಯತ ಸೇವಾ ಟ್ರಸ್ಟ್, ಗ್ರಾಮೀಣ ಜ್ಞಾನೋದಯ ಅನುಭವ ಮಂಟಪ ಹಾಗೂ ವಿದ್ಯಾಶಂಕರ ಸೇವಾ ಟ್ರಸ್ಟ್ ನೇತೃತ್ವದಲ್ಲಿ ಪ್ರತಿಭಟನೆ ನಡೆಯಿತು.

ಯು.ಎಂ. ಗುರುಲಿಂಗಪ್ಪ ಗೌಡ್ರು, ಎಂ.ಎಫ್. ಕುಸಗೂರು, ಪ್ರಭುಲಿಂಗಪ್ಪ ಸಿ. ಹಲಗೇರಿ, ರುದ್ರಪ್ಪ ಎನ್. ಬಾಳಿಕಾಯಿ, ವಕೀಲ ಬುರುಡಿ ಕಟ್ಟಿ, ಜಿ.ಬಿ. ಬೆಳವಗಿ, ಯು.ಎಂ. ಪಾಟೀಲ, ಶೇಖಪ್ಪ ಹೊಸಗೌಡ್ರು, ಏಕಾಂತ ಮುದಿಗೌಡ್ರು, ಈರಣ್ಣ ಮಾಕನೂರ ಸೇರಿದಂತೆ ಹಲವು ಮುಖಂಡರು ಪ್ರತಿಭಟನೆಯ ನೇತೃತ್ವ ವಹಿಸಿದ್ದರು. ನಗರದ ಬಸವ ಅಭಿಮಾನಿಗಳು, ಬಸವ ಪ್ರೇಮಿಗಳು, ಲಿಂಗಾಯತರು, ವಕೀಲರು, ವ್ಯಾಪಾರಸ್ಥರು, ಕೃಷಿಕರು, ಕಾರ್ಮಿಕರು ಹಾಗೂ ನಿವೃತ್ತ ನೌಕರರು ಭಾಗವಹಿಸಿದ್ದರು.

ಹಾವೇರಿ ಜಿಲ್ಲೆಗೆ ಪ್ರತ್ಯೇಕ ಜಲಾಶಯ ಸೇರಿಸಲು ಕರವೇ ಸ್ವಾಭಿಮಾನಿ ಸೇನೆ ಆಗ್ರಹ



ಪಾಂಡವ ನ್ಯೂಸ್, ಹಾವೇರಿ: ಬೆಡ್ತಿ–ವರದಾ ನದಿ ಜೋಡಣೆ ಯೋಜನೆಯ ವಿಸ್ತೃತ ಯೋಜನಾ ವರದಿ (ಡಿಪಿಆರ್) ಸಿದ್ಧಪಡಿಸುವ ಕಾರ್ಯಕ್ಕೆ ವೇಗ ನೀಡಿ, ಮೂರು ತಿಂಗಳೊಳಗೆ ಪೂರ್ಣಗೊಳಿಸಿ ಕೇಂದ್ರ ಸರ್ಕಾರಕ್ಕೆ ಸಲ್ಲಿಸಬೇಕು ಎಂದು ಆಗ್ರಹಿಸಿ ಕರ್ನಾಟಕ ರಕ್ಷಣಾ ವೇದಿಕೆ ಸ್ವಾಭಿಮಾನಿ ಸೇನೆಯ ಜಿಲ್ಲಾ ಘಟಕದ ಪದಾಧಿಕಾರಿಗಳು ಸೋಮವಾರ ಜಿಲ್ಲಾಧಿಕಾರಿ ಮೂಲಕ ಮುಖ್ಯಮಂತ್ರಿಗೆ ಮನವಿ ಸಲ್ಲಿಸಿದರು.

ಜಿಲ್ಲಾ ಘಟಕದ ಅಧ್ಯಕ್ಷ ಮಂಜುನಾಥ ಜಾನಪದ ಮಾತನಾಡಿ, ಹಾವೇರಿ ಜಿಲ್ಲೆ ಕಳೆದ 30 ವರ್ಷಗಳಲ್ಲಿ 17 ಬಾರಿ ತೀವ್ರ ಬರಗಾಲ ಎದುರಿಸಿದೆ. ಜಿಲ್ಲೆಯ ಎಂಟು ತಾಲೂಕುಗಳಲ್ಲಿ ಕುಡಿಯುವ ನೀರಿನ ಸಮಸ್ಯೆ ತೀವ್ರವಾಗಿದ್ದು, ರೈತರು ಸಂಕಷ್ಟದಲ್ಲಿದ್ದಾರೆ. 1992ರಿಂದ ನೆನೆಗುದಿಗೆ ಬಿದ್ದಿರುವ ಬೆಡ್ತಿ–ವರದಾ ನದಿ ಜೋಡಣೆ ಯೋಜನೆಯನ್ನು ತ್ವರಿತವಾಗಿ ಅನುಷ್ಠಾನಗೊಳಿಸಬೇಕು ಎಂದು ಒತ್ತಾಯಿಸಿದರು.

ಪಶ್ಚಿಮಕ್ಕೆ ಹರಿದು ಅರಬ್ಬಿ ಸಮುದ್ರ ಸೇರುವ ಬೆಡ್ತಿ ನದಿಯ ಹೆಚ್ಚುವರಿ 18 ಟಿಎಂಸಿ ನೀರನ್ನು ಪೂರ್ವಕ್ಕೆ ತಿರುಗಿಸಿ ವರದಾ ನದಿಗೆ ಹರಿಸುವುದು ಯೋಜನೆಯ ಉದ್ದೇಶ. ಇದರಿಂದ ಹಾವೇರಿ, ಗದಗ, ಕೊಪ್ಪಳ ಹಾಗೂ ರಾಯಚೂರು ಜಿಲ್ಲೆಗಳ ಬರ ಸಮಸ್ಯೆಗೆ ಪರಿಹಾರ ದೊರೆಯಲಿದೆ. 1992ರಲ್ಲಿ ಯೋಜನೆಯ ಪರಿಕಲ್ಪನೆ ರೂಪಿಸಲಾಗಿದ್ದು, 1994ರಲ್ಲಿ ಘೋಷಣೆ ಮಾಡಲಾಗಿತ್ತು. 2003ರಲ್ಲಿ ರಾಷ್ಟ್ರೀಯ ಜಲ ಅಭಿವೃದ್ಧಿ ಸಂಸ್ಥೆ ಅಧ್ಯಯನ ನಡೆಸಿತ್ತು. 2024–25ರಲ್ಲಿ ಪರಿಸರ ಸ್ನೇಹಿ ಹೊಸ ವಿನ್ಯಾಸ ಸಿದ್ಧಪಡಿಸಲಾಗಿದೆ ಎಂದರು.

ಜಿಲ್ಲಾ ಮಹಿಳಾ ಘಟಕದ ಅಧ್ಯಕ್ಷೆ ಸುಮಾ ಪುರದ ಮಾತನಾಡಿ, ಹೊಸ ವಿನ್ಯಾಸದಲ್ಲಿ ಬೃಹತ್ ಅಣೆಕಟ್ಟಿನ ಬದಲಿಗೆ ಬ್ಯಾರೇಜ್ ಮತ್ತು ಲಿಫ್ಟ್ ವ್ಯವಸ್ಥೆ ರೂಪಿಸಲಾಗಿದೆ. ಅರಣ್ಯ ನಾಶ ಕಡಿಮೆಗೊಳಿಸುವ ಜತೆಗೆ 6.88 ಕಿ.ಮೀ. ಸುರಂಗ ಮಾರ್ಗ ನಿರ್ಮಿಸುವ ಯೋಜನೆ ಇದಾಗಿದೆ. ಕೇಂದ್ರ ಸರ್ಕಾರದಿಂದ ಶೇ.90ರಷ್ಟು ಅನುದಾನ ಪಡೆಯುವ ಅವಕಾಶವೂ ಇದೆ ಎಂದು ತಿಳಿಸಿದರು.

ಯೋಜನೆಯಿಂದ ಹಾವೇರಿ ಜಿಲ್ಲೆಯ 128 ಹಳ್ಳಿಗಳು ಸೇರಿದಂತೆ ನಾಲ್ಕು ಜಿಲ್ಲೆಗಳ 1.06 ಲಕ್ಷ ಹೆಕ್ಟೇರ್ ಕೃಷಿ ಭೂಮಿಗೆ ನೀರಾವರಿ ಸೌಲಭ್ಯ ದೊರೆಯಲಿದೆ. ಜಿಲ್ಲೆಯ ಎಂಟು ತಾಲೂಕುಗಳ ಪಟ್ಟಣ ಮತ್ತು ಹಳ್ಳಿಗಳಿಗೆ ಕುಡಿಯುವ ನೀರು ಪೂರೈಕೆಯಾಗಲಿದೆ. 100ಕ್ಕೂ ಹೆಚ್ಚು ಕೆರೆಗಳಿಗೆ ನೀರು ತುಂಬಿಸುವುದರಿಂದ ಅಂತರ್ಜಲ ಮಟ್ಟವೂ ಹೆಚ್ಚಲಿದೆ ಎಂದರು.

ಯೋಜನೆಯ ಡಿಪಿಆರ್ ಸಿದ್ಧಪಡಿಸುವ ಹಂತದಲ್ಲಿದ್ದು, ರಾಜ್ಯ ಸರ್ಕಾರ ಈಗಾಗಲೇ ಒಪ್ಪಂದಕ್ಕೆ ಸಹಿ ಹಾಕಿದೆ. ಆದರೂ ವರದಿ ಸಿದ್ಧತೆ ವಿಳಂಬವಾಗುತ್ತಿದೆ. ಹೀಗಾಗಿ ರಾಜ್ಯ ಸರ್ಕಾರ ಕೂಡಲೇ ಕ್ರಮ ಕೈಗೊಂಡು ಯೋಜನೆ ಅನುಷ್ಠಾನಕ್ಕೆ ಮುಂದಾಗಬೇಕು ಎಂದು ಆಗ್ರಹಿಸಿದರು.

ಪ್ರತ್ಯೇಕ ಜಲಾಶಯಕ್ಕೆ ಒತ್ತಾಯ :ಡಿಪಿಆರ್‌ನಲ್ಲಿ ಹಾವೇರಿ ಜಿಲ್ಲೆಗೆ ಪ್ರತ್ಯೇಕ ನೀರು ಸಂಗ್ರಹ ಜಲಾಶಯವನ್ನು ಕಡ್ಡಾಯವಾಗಿ ಸೇರಿಸಬೇಕು. ಮೂರು ತಿಂಗಳೊಳಗೆ ವರದಿ ಪೂರ್ಣಗೊಳಿಸಿ ಕೇಂದ್ರಕ್ಕೆ ಸಲ್ಲಿಸಬೇಕು. ಬೆಳಗಾವಿ ಅಧಿವೇಶನದೊಳಗೆ ಮುಖ್ಯಮಂತ್ರಿ ಅವರು ಜಿಲ್ಲೆಯ ಎಲ್ಲ ಶಾಸಕರು, ಸಂಸದರು ಹಾಗೂ ಮಠಾಧೀಶರ ಸಭೆ ಕರೆದು ಯೋಜನೆಯ ಅನುಷ್ಠಾನದ ಕುರಿತು ಚರ್ಚಿಸಬೇಕು ಎಂದು ಮನವಿಯಲ್ಲಿ ಒತ್ತಾಯಿಸಲಾಗಿದೆ.

ಜಿಲ್ಲಾ ಗೌರವಾಧ್ಯಕ್ಷ ಎಂ.ಕೆ. ತಿಮ್ಮಾಪುರ, ಉಪಾಧ್ಯಕ್ಷ ಪ್ರವೀಣ್ ಕಾಗದ, ಜಿಲ್ಲಾ ಮಹಿಳಾ ಸಮಿತಿಯ ರೇಣುಕಾ ಗಡಿಯಣ್ಣನವರ, ಮೀನಾಕ್ಷಮ್ಮ ಗಾಜಿ, ಲಲಿತಾ ಬ್ಯಾಡಗಿ, ಶಿಗ್ಗಾವಿ ತಾಲೂಕು ಅಧ್ಯಕ್ಷ ಸುರೇಶ್ ವನಹಳ್ಳಿ, ಹಾವೇರಿ ತಾಲೂಕು ಅಧ್ಯಕ್ಷ ಮಂಜುನಾಥ ಬಡಿಗೇರ, ಶಿಗ್ಗಾವಿ ತಾಲೂಕು ಉಪಾಧ್ಯಕ್ಷ ಮಂಜುನಾಥಗೌಡ ಪಾಟೀಲ ಸೇರಿದಂತೆ ಹಲವು ಮುಖಂಡರು ಉಪಸ್ಥಿತರಿದ್ದರು.

ಉಡಚಪ್ಪ ಮಾಳಗಿಗೆ ಭೀಮ ಸೇವಾ ರತ್ನ ಪ್ರಶಸ್ತಿ: ಆದಿ ಜಾಂಬವ ಸಂಘದಿಂದ ಗೌರವ ಸನ್ಮಾನ



ಪಾಂಡವ ನ್ಯೂಸ್, ಹಾವೇರಿ : ಕರ್ನಾಟಕ ರಾಜ್ಯ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ, ಹಿಂದುಳಿದ ವರ್ಗಗಳ ಹಾಗೂ ಅಲ್ಪಸಂಖ್ಯಾತರ ಕಲ್ಯಾಣ ಸಮಿತಿ (ರಿ.) ರಾಜ್ಯಾಧ್ಯಕ್ಷರು ಹಾಗೂ ಡಿಎಸ್‌ಎಸ್ ರಾಜ್ಯ ಸಂಘಟನಾ ಸಂಚಾಲಕರಾದ ಉಡಚಪ್ಪ ಮಾಳಗಿ ಅವರಿಗೆ ಭೀಮ ಸೇವಾ ರತ್ನ ಪ್ರಶಸ್ತಿ ಲಭಿಸಿದ ಹಿನ್ನೆಲೆಯಲ್ಲಿ ಅಖಿಲ ಕರ್ನಾಟಕ ಆದಿ ಜಾಂಬವ ಸಂಘದ ವತಿಯಿಂದ ನಗರದ ಪ್ರವಾಸಿ ಮಂದಿರದಲ್ಲಿ ಗೌರವಿಸಿ ಸನ್ಮಾನಿಸಲಾಯಿತು.

ಅಖಿಲ ಕರ್ನಾಟಕ ಆದಿ ಜಾಂಬವ ಸಂಘದ ಪ್ರಧಾನ ಕಾರ್ಯದರ್ಶಿ ಮಹೇಶ ಡಿ. ಮಾಳಗಿ ಕಾರ್ಯಕ್ರಮದ ನೇತೃತ್ವ ವಹಿಸಿ ಮಾತನಾಡಿ, ಉಡಚಪ್ಪ ಮಾಳಗಿ ಅವರು ರಾಜ್ಯಮಟ್ಟದಲ್ಲಿ ಬೆಳೆದು ಸಾಮಾಜಿಕ ಕ್ಷೇತ್ರದಲ್ಲಿ ತಮ್ಮದೇ ಆದ ಛಾಪು ಮೂಡಿಸಿದ್ದಾರೆ. ಅವರ ಸಾಮಾಜಿಕ ಕಳಕಳಿ, ಹೋರಾಟದ ಮನೋಭಾವ ಹಾಗೂ ಸಂಘಟನಾ ಸಾಮರ್ಥ್ಯ ಸಮಾಜದ ಯುವಜನರಿಗೆ ಮಾದರಿಯಾಗಿದೆ. ಅವರ ಮಾರ್

ಪ್ರಮುಖ ಸಂಕ್ಷಿಪ್ತ ಸುದ್ದಿ

ಬಳ್ಳಾರಿ: ಜಿಟಿಟಿಸಿಯಲ್ಲಿ ಉಚಿತ ತಾಂತ್ರಿಕ ತರಬೇತಿಗೆ ಅರ್ಜಿ ಆಹ್ವಾನ

ಪಾಂಡವ ನ್ಯೂಸ್, ಬಳ್ಳಾರಿ : ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತು ಜೀವನೋಪಾಯ ಇಲಾಖೆಯ ಅಧೀನದ ಬಳ್ಳಾರಿಯ ಸರ್ಕಾರಿ ಉಪಕರಣಾಗಾರ ಮತ್ತು ತರಬೇತಿ ಕೇಂದ್ರದಲ್ಲಿ (ಜಿಟಿಟಿಸಿ) ಮೂರು ಉಚಿತ ತಾಂತ್ರಿಕ ವೃತ್ತಿ ತರಬೇತಿ ಕೋರ್ಸ್‌ಗಳಿಗೆ ಪ್ರವೇಶ ಪ್ರಾರಂಭವಾಗಿದ್ದು, ಆಸಕ್ತ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದೆ.

ಲಭ್ಯವಿರುವ ಕೋರ್ಸ್‌ಗಳು ಮತ್ತು ವಿವರ: ಕೋರ್ಸ್‌ಗಳು: ಸಿಎನ್‌ಸಿ ವರ್ಟಿಕಲ್ ಮಷಿನಿಂಗ್ ಆಪರೇಟರ್, ಸಿಎನ್‌ಸಿ ಪ್ರೊಗ್ರಾಮರ್ ಮತ್ತು ಡ್ರಾಫ್ಟ್ಸ್‌ಮ್ಯಾನ್ ಮೆಕಾನಿಕಲ್‌ತರಬೇತಿಗಳು ಲಭ್ಯವಿವೆ.

ಶೈಕ್ಷಣಿಕ ಅರ್ಹತೆ: ಡಿಪ್ಲೊಮಾ, ಐಟಿಐ ಅಥವಾ ಕನಿಷ್ಠ ಎಸ್‌ಎಸ್‌ಎಲ್‌ಸಿ (10ನೇ ತರಗತಿ) ಉತ್ತೀರ್ಣರಾದ ಅಭ್ಯರ್ಥಿಗಳು ಅರ್ಜಿ ಸಲ್ಲಿಸಬಹುದು. ಕೋರ್ಸ್ ಅವಧಿ: ಈ ತರಬೇತಿಗಳು 4 ತಿಂಗಳ ಅವಧಿಯದ್ದಾಗಿವೆ.

ಉದ್ಯೋಗಾವಕಾಶ ಮತ್ತು ವಿಶೇಷತೆಗಳು : ಸಿಎನ್‌ಸಿ ಆಪರೇಟಿಂಗ್, ಪ್ರೊಗ್ರಾಮಿಂಗ್ ಮತ್ತು ಡ್ರಾಫ್ಟ್ಸ್‌ಮ್ಯಾನ್ ಮೆಕಾನಿಕಲ್ ಕೌಶಲ್ಯ ಹೊಂದಿದವರಿಗೆ ಕೈಗಾರಿಕಾ ಕ್ಷೇತ್ರದಲ್ಲಿ ಹೆಚ್ಚಿನ ಬೇಡಿಕೆಯಿದ್ದು, ಹೆಚ್ಚಿನ ಉದ್ಯೋಗಾವಕಾಶಗಳು ಲಭಿಸುತ್ತವೆ.

ಈ ಕೌಶಲ್ಯಗಳಿಗೆ ಟೂಲಿಂಗ್, ವಿಮಾನತಯಾರಿಕೆ ಮತ್ತು ಆಟೋಮೊಬೈಲ್ ವಲಯದ ಕೈಗಾರಿಕೆಗಳಲ್ಲಿ ವಿಶೇಷ ಬೇಡಿಕೆ ಇದೆ.

ಜಿಟಿಟಿಸಿ ಕೇಂದ್ರದಲ್ಲಿ ಉನ್ನತ ತಂತ್ರಜ್ಞಾನ ಮತ್ತು ಸೌಕರ್ಯಗಳಿದ್ದು, ಕೈಗಾರಿಕೆಗಳಲ್ಲಿ ಅನುಭವ ಹೊಂದಿರುವ ಪ್ರಶಿಕ್ಷಕರಿಂದ ತರಬೇತಿ ನೀಡಲಾಗುತ್ತದೆ. ಪ್ರವೇಶಾತಿಯಲ್ಲಿ "ಮೊದಲು ಬಂದವರಿಗೆ ಮೊದಲ ಆದ್ಯತೆ" ನಿಯಮ ಅನ್ವಯವಾಗುತ್ತದೆ.

ಆಸಕ್ತ ಆಕಾಂಕ್ಷಿಗಳು ಈ ಉಚಿತ ತರಬೇತಿಯ ಸದುಪಯೋಗ ಪಡೆದುಕೊಳ್ಳಬಹುದು. ಹೆಚ್ಚಿನ ಮಾಹಿತಿಗಾಗಿ ಸರ್ಕಾರಿ ಉಪಕರಣಾಗಾರ ಮತ್ತು ತರಬೇತಿ ಕೇಂದ್ರ, ಐಶ್ವರ್ಯ ಕಾಲೋನಿ (ಐ.ಟಿ.ಐ. ಕ್ಯಾಂಪಸ್), ಕಂಟೋನ್ಮೆಂಟ್ ಬಳ್ಳಾರಿ – 583104 ಇಲ್ಲಿಗೆ ಅಥವಾ 08392 200087, 9620057086, 6361880236, 7795680677 ದೂರವಾಣಿ ಸಂಖ್ಯೆಗಳಿಗೆ ಸಂಪರ್ಕಿಸಬಹುದು ಎಂದ ಜಿಟಿಟಿಸಿ ಯಪ್ರಾಂಶುಪಾಲರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ವೃದ್ಧೆಕಾಣೆ: ಪತ್ತೆಗೆ ಮನವಿ

ಪಾಂಡವ ನ್ಯೂಸ್, ಬಳ್ಳಾರಿ : ನಗರದ ಸೊಂತಲಿಂಗಣ ಕಾಲೋನಿಯ ನಿವಾಸಿ ಜಿ.ಉಮಾದೇವಿ ಎನ್ನುವ 79 ವರ್ಷದ ವೃದ್ಧೆಅಕ್ಟೋಬರ್ 19 ರಂದು ಮನೆಯಿಂದ ಹೊರ ಹೋಗಿ ಮನೆಗೆ ಬಾರದೇ ಕಾಣೆಯಾಗಿರುವ ಕುರಿತು ಗಾಂಧಿನಗರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದ್ದು, ಪತ್ತೆಗೆ ಸಹಕರಿಸಬೇಕು ಎಂದ ಠಾಣಾಧಿಕಾರಿ ಮನವಿ ಮಾಡಿದ್ದಾರೆ.

ವೃದ್ಧೆಯ ಚಹರೆ ಗುರುತು: ಎತ್ತರ 5 ಅಡಿ, ಗೋಧಿ ಮೈಬಣ್ಣ, ದುಂಡು ಮುಖ ಹೊಂದಿದ್ದು, ಕಾಣೆಯಾದ ಸಂದರ್ಭದಲ್ಲಿ ಕೆಂಪು ಬಣ್ಣದ ಸೀರೆ ಮತ್ತು ಆರೆಂಜ್ ಬಣ್ಣದ ಕುಪ್ಪಸವನ್ನು ಧರಿಸಿರುತ್ತಾರೆ. ಕನ್ನಡ, ಹಿಂದಿ, ತೆಲುಗು ಭಾಷೆಯನ್ನು ಮಾತನಾಡುತ್ತಾಳೆ.

ಕಾಣೆಯಾದ ವೃದ್ಧೆಯ ಬಗ್ಗೆ ಮಾಹಿತಿ ಸಿಕ್ಕಲ್ಲಿ ಗಾಂಧಿನಗರ ಪೊಲೀಸ್ ಠಾಣೆಯ ದೂ.08392–272192, ಮೊ.9480803046, ಬಳ್ಳಾರಿ ಪೊಲೀಸ್ ಕಂಟ್ರೋಲ್‌ರೂಂ ದೂ.08392–258100 ಗೆ ಕರೆ ಮಾಡಿ ಮಾಹಿತಿ ನೀಡಬಹುದಾಗಿದೆ ಎಂದು ಪ್ರಕಟಣೆಯಲ್ಲಿ ಕೋರಿದ್ದಾರೆ.

ಅನಾಮಧೇಯ ಮೃತ ವ್ಯಕ್ತಿ: ವಾರಸುದಾರರ ಪತ್ತೆಗೆ ಮನವಿ

ಪಾಂಡವ ನ್ಯೂಸ್, ಬಳ್ಳಾರಿ : ನಗರದ ಜಿಲ್ಲಾ ಆಸ್ಪತ್ರೆಯ ಮುಖ್ಯದ್ವಾರದ ಬಳಿ ಇರುವ ಪಾದಚಾರಿ ಮಾರ್ಗದ ಮೇಲೆ ಅಂದಾಜು 50–55 ವರ್ಷದ ಅನಾಮಧೇಯ ವ್ಯಕ್ತಿಯು ನ.22 ರಂದು ಮೃತಪಟ್ಟಿದ್ದು, ಈ ಕುರಿತುಗಾಂಧಿನಗರ ಪೊಲೀಸ್‌ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ಮೃತನ ವಾರಸುದಾರರ ಪತ್ತೆಗೆ ಸಹಕರಿಸಬೇಕು ಎಂದು ಠಾಣಾಧಿಕಾರಿ ಮನವಿ ಮಾಡಿದ್ದಾರೆ.

ಮೃತನ ಚಹರೆ: ಎತ್ತರ ಅಂದಾಜು 5.5 ಅಡಿ, ಕೋಲು ಮುಖ, ಗೋಧಿ ಮೈಬಣ್ಣ, ದೃಢವಾದ ಮೈಕಟ್ಟು ಹೊಂದಿದ್ದು, ತಲೆಯಲ್ಲಿ ಕಪ್ಪು ಹಾಗೂ ಬಿಳಿ ಬಣ್ಣದ ಕೂದಲು ಇರುತ್ತದೆ. ಮೃತನ ಮೈಮೇಲೆ ತಿಳಿನೀಲಿ ಬಣ್ಣದ ಹಾಗೂ ಚೆಕ್ಸ್ ಬಣ್ಣದ ತುಂಬು ತೋಳಿನ ಅಂಗಿ ಮತ್ತು ಸೋಂಟದಲ್ಲಿ ಕಂದು ಬಣ್ಣದ ಚಡ್ಡಿ ಧರಿಸಿರುತ್ತಾನೆ.

ಮೇಲ್ಕಂಡ ಚಹರೆ ಗುರುತುಗಳುಳ್ಳ ಮೃತ ವ್ಯಕ್ತಿಯ ವಾರಸುದಾರರ ಬಗ್ಗೆ ಮಾಹಿತಿ ಸಿಕ್ಕಲ್ಲಿ ಗಾಂಧಿನಗರ ಪೊಲೀಸ್ ಠಾಣೆಯ ದೂ.08392–272192, ಪಿ.ಐ ಮೊ.9480803046 ಅಥವಾ ಬಳ್ಳಾರಿ ಪೊಲೀಸ್‌ಕಂಟ್ರೋಲ್‌ರೂಂ ದೂ:08392–258100 ಗೆ ಸಂಪರ್ಕಿಸಬಹುದು ಎಂದು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಎಸ್.ಓ.ಜಿ. ಕಾಲೋನಿಯ ಗೆಳೆಯರ ಬಳಗದಿಂದ 71 ಕನ್ನಡರಾಜ್ಯೋತ್ಸವ ಆಚರಣೆ

ಪಾಂಡವ ನ್ಯೂಸ್, ದಾವಣಗೆರೆ : ಕನ್ನಡ ಭಾಷೆಯನ್ನು ಪ್ರೀತಿಸೋಣ, ಗೌರವಿಸೋಣ ಮತ್ತು ಮುಂದಿನ ಪೀಳಿಗೆಗೂ ಕನ್ನಡದ ಕಂಪನ್ನು ಪಸರಿಸೋಣ. ಇಂದಿನ ಮಕ್ಕಳು ಕನ್ನಡ ನಾಡು–ನುಡಿ ಬಗ್ಗೆ ಗೌರವ ಹೆಚ್ಚಿಸಬೇಕು ಎಂದು ದಾವಣಗೆರೆ–ಹರಿಹರ ನಗರಾಭಿವೃದ್ಧಿ ಪ್ರಾಧಿಕಾರದಅಧ್ಯಕ್ಷ ದಿನೇಶ್ ಕೆ. ಶೆಟ್ಟಿ ಹೇಳಿದರು. ಅವರು ನಗರದ ಎಸ್.ಓ.ಜಿ. ಕಾಲೋನಿಯ ಗೆಳೆಯರ ಬಳಗದ ವತಿಯಿಂದ 71 ಕನ್ನಡರಾಜ್ಯೋತ್ಸವ ಸಮಾರಂಭ ಉದ್ಘಾಟಿಸಿ ಮಾತನಾಡಿದರು. ಅನ್ಯಾಯ ನಡೆದಾಗ ಪ್ರತಿಭಟಿಸುವುದು ನಮ್ಮಉದ್ದೇಶ.

ಪ್ರಗತಿ ಸಾಧಿಸಿದಾಗ ಅಭಿನಂದಿಸುವುದು ನಮ್ಮಧರ್ಮ. ರಾಷ್ಟ್ರಧ್ವಜಎಲ್ಲಾ ಸರ್ಕಾರಿ ಕಛೇರಿಗಳಲ್ಲಿ ಹಾರಿಸುವುದರಜೊತೆಗೆ ನಾಡಧ್ವಜವನ್ನು ಸಹ ಹಾರಿಸಬೇಕು ಎಂದು ನಮ್ಮಒತ್ತಾಯವಾಗಿದೆ–ಎಂದರು.

31ನೇ ವಾರ್ಡಿನ ಮಹಿಳಾ ಕಾಂಗ್ರೆಸ್‌ಅಧ್ಯಕ್ಷೆ ಶ್ರೀಮತಿ ಸಂಗೀತಆರ್.ಬಿ. ಪ್ರಕಾಶ್, ಶ್ರೀಮತಿ ಶೈಲಾ ನಾಗರಾಜ್, ಜ್ಯೋತಿ, ಮಮತ, ಶ್ರೀಮತಿ ರತ್ನಮ್ಮರವಿಕುಮಾರ್, ಮಂಜುಳಾ, ಮೇಘನಾ, ಶೋಭಾ ಶ್ರೀಮತಿ ಗೀತಾ ಮಾರುತಿ, ನಂದಾಮಣಿ, ಗೀತಾ, ಚಂದ್ರಮ್ಮ, ರೇಖಾ, ನೀಲಮ್ಮ, ಶ್ರೀಮತಿ ಮಂಜುಳಾ ರುದ್ರೇಶ್, ಪತ್ರಕರ್ತ ಎಂ. ಗುರುಮೂರ್ತಿ, ರವಿಕುಮಾರ್,ಬಿ. ಮಾರುತಿ.ಡಿ. ಎನ್. ಹಾಲೇಶ್ ನಲ್ಕುದುರೆ, ಗಣೇಶ್ ಹುಲ್ಲುಮನೆ, ರೇವಣಸಿದ್ದಪ್ಪ, ಎಸ್.ಎಂ. ರುದ್ರೇಶ್, ಚಂದ್ರಪ್ಪ, ಗಿರೀಶ್, ನಾಗಣ್ಣ ಸೊಪ್ಪು, ಹೋಟೇಲ್‌ರುದ್ರೇಶ್, ಚನ್ನಬಸಪ್ಪ, ಮುನಿಯಪ್ಪ, ಫಯಾಜ್, ಸುರೇಶ್‌ಆಮ್ಲೇಟ್, ಕಾಂತರಾಜ್, ಅನಿಲ್, ಡಿ.ಜಿ. ಶಿವಕುಮಾರ್, ಗುರುರಾಜ್, ರವಿಕುಮಾರ್ ಹಾಗೂ 31 ಹಾಗೂ 41ನೇ ನಾಗರೀಕರು ಈ ಸಂದರ್ಭದಲ್ಲಿ ಉಪಸ್ಥಿತರಿದ್ದರು.

ಈ ಸಂದರ್ಭದಲ್ಲಿ ವಿವಿಧ ಕ್ಷೇತ್ರದಲ್ಲಿ ಸೇವೆ ಸಲ್ಲಿಸಿದ ಗಣ್ಯರನ್ನು ಸನ್ಮಾನಿಸಲಾಯಿತು. ಸಂಜೆ ದಿಯಾ ಮೆಲೋಡಿಸ್‌ರವರಿಂದರಸಮಂಜರಿಕಾರ್ಯಕ್ರಮಏರ್ಪಡಿಸಲಾಗಿತ್ತು. ಮಾರುತಿ ಸ್ವಾಗತಿದರು. ಶೃತಿ ನಿರೂಪಿಸಿದರು.

ಬಸವಣ್ಣನವರ ಕುರಿತು ರವಿ ಹಂಜರ "ಬಸವ ಮಂಟಪ" ಕೃತಿಯನ್ನು ನಿಷೇಧಿಸಿ ಮತ್ತು ಬಂಧಿಸಲು ಅಗ್ರಹ



ಪಾಂಡವ ನ್ಯೂಸ್, ಬಳ್ಳಾರಿ : ಕರ್ನಾಟಕದ ಸಾಂಸ್ಕೃತಿಕ ನಾಯಕ, ವಿಶ್ವಗುರು ಬಸವಣ್ಣನವರನ್ನು ಹಾಗೂ ವೀರಶೈವ ಲಿಂಗಾಯತರನ್ನು ಅವಹೇಳನ ಮಾಡಿರುವ ಲೇಖಕ ರವಿ ಹಂಜಳ ಬಸವ ಭಕ್ತರ ಹಾಗೂ ವೀರಶೈವ ಲಿಂಗಾಯತ ಸಮುದಾಯದವರ ಮನಸ್ಸಿಗೆ ತೀವ್ರ ಘಾಸಿ. ಮಾಡಿರುತ್ತಾರೆ. ಇಡೀ ವೀರಶೈವ ಲಿಂಗಾಯತ ಸಮುದಾಯಕ್ಕೆ ಮತ್ತು ವಿಶ್ವಗುರು ಬಸವಣ್ಣನವರ ಅನುಯಾಯಿಗಳ ಮನಸ್ಸಿಗೆ ನೋವುಂಟಾಗುವಂತೆ ಆಧಾರ ರಹಿತ ಆರೋಪ ಮಾಡಿರುವ ರವಿ ಹಂಜರ "ಬಸವ ಮಂಟಪ" ಕೃತಿಯನ್ನು ಮುಟ್ಟುಗೋಲು ಹಾಕಿಕೊಂಡು ರವಿ ಹಂಜೆ ಮತ್ತು ವಿಶ್ವೇಶ್ವರ ಭಟ್ಟ ಅವರನ್ನು ಕೂಡಲೇ ಬಂಧಿಸಬೇಕೆಂದು ರಾಷ್ಟ್ರೀಯ ಬಸವದಳ ಮತ್ತು ವೀರಶೈವ ಲಿಂಗಾಯತ ಮಹಾಸಭಾ ಪದಾಧಿಕಾರಿಗಳು ಆಗ್ರಹಿಸಿದರು.

ಈ ಕುರಿತು ಎರಡು ಸಂಘಟನೆಗಳ ಪದಾಧಿಕಾರಿಗಳು ಬಳ್ಳಾರಿ ಜಿಲ್ಲಾಧಿಕಾರಿಗಳ ಮೂಲಕ ಮುಖ್ಯಮಂತ್ರಿಗಳಿಗೆ ಮನೆಯನ್ನು ಸಲ್ಲಿಸಿ, ರವಿ ಹಂಜಾ ರಚಿತಾ ಕೃತಿ ಬಸವ ಮಂಟಪ ಸಮಾಜದ ಸ್ವಾಸ್ಥ್ಯಕದಡುವಂತಿವೆ. ಹೀಗಾಗಿ ಇಂತಹ ರವಿ ಹಂಜ ಕೃತಿಯನ್ನು ಮುಟ್ಟುವಲಾಗಿ ಕಂಡು ಅವರನ್ನು ಕೂಡಲೇ ಬಂಧಿಸಿ, ಕಾನೂನು ಕ್ರಮಜರುಗಿಸಲು ರಾಷ್ಟ್ರೀಯ ಬಸವದಳ ಅಧ್ಯಕ್ಷರಾದ ರವಿಶಂಕರ್ ಮತ್ತು ವೀರಶೈವ ಮಹಾಸಭಾ ಜಿಲ್ಲಾಧ್ಯಕ್ಷರಾದ ಬಿಜಿಕಲ್ ಪಂಚಾಕ್ಷರಪ್ಪ ಆಗ್ರಹಿಸಿದರು

ಸಂವಿಧಾನದತ್ತವಾದ ವಾಕ್ ಸ್ವಾತಂತ್ರ್ಯ ಮತ್ತು ಅಭಿವ್ಯಕ್ತಿ ಸ್ವಾತಂತ್ರ್ಯಕ್ಕೆ ಮಹಾಸಭೆಗೌರವ ನೀಡುತ್ತದೆ. ಆದರೆ ಬಸವಣ್ಣನವರನ್ನು ಕೊಲೆಗಡುಕ, ದರೋಡೆಕೋರ, ಬಿಜ್ಜಳನ ಖಜಾನೆದುರುಪಯೋಗ ಪಡಿಸಿಕೊಂಡು ಶರಣದಾಸೋಹ ಮಾಡಿದ್ದಾನೆ ಎಂದೆಲ್ಲಾ ಅವಹೇಳನಕಾರಿಯಾಗಿ ಮಾತನಾಡುತ್ತಿರುವ ಮತ್ತು ಅಂತಹ ಬರಹವನ್ನು ಮಹಾಸಭೆ ಒಪ್ಪಲು ಸಾಧ್ಯವೇ ಇಲ್ಲ. ಸಂಶೋಧಕ ರವಿ ಹಂಜಳ ವಿರುದ್ಧ ಪ್ರಚೋದನಕಾರಿ ಹೇಳಿಕೆ ನೀಡಿದಕಾರಣಕ್ಕೆ ಸ್ವಯಂ ಪ್ರೇರಿತ ಪ್ರಕರಣವನ್ನು ದಾಖಲಿಸಿಕೊಂಡು ಕೂಡಲೇ ಬಂಧಿಸಬೇಕು ಹಾಗೂ ವಿವಾದಿತಕೃತಿ "ಬಸವ ಮಂಟಪ" ಕೃತಿಯನ್ನು ಮುಟ್ಟುಗೋಲು ಹಾಕಿಕೊಳ್ಳುವಚತೆ ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭೆಯ ಪದಾಧಿಕಾರಿಗಳು ಹಾಗೂ ರಾಷ್ಟ್ರೀಯ ಬಸವದಳ ಪದಾಧಿಕಾರಿಗಳು ಒತ್ತಾಯಿಸುತಿದ್ದೇವೆ ಎಂದರು.

ಈ ಸಂದರ್ಭದಲ್ಲಿ ಸಿರಿಗೇರಿ ಪನ್ನರಾಜ್ ನಿಷ್ಠಿ ರುದ್ರಪ್ಪ ಗಂಗಾವತಿ ವೀರೇಶ್ ಬಂಡೆಗೌಡ ಭೀಮನಗೌಡ ಮಹೇಶ್ ಬಣಕಾರ್ ಮತ್ತು ಅಂದ್ರಾಳ್ ರಾಷ್ಟ್ರೀಯ ಬಸವದಳದ ಬಸವನಗೌಡ ರವಿಶಂಕರ್ ದುರ್ಗಣ್ಣ ವಚನಾಂಬಿಕೆ ಸುರೇಶ್ ತಿಪ್ಪೇಸ್ವಾಮಿ ಬಸವರಾಜ್ ಶಿವಕುಮಾರ್ ಸೇರಿದಂತೆ ಹಲವಾರು ಜನ ವೀರಶೈವ ಸಮುದಾಯದ ಹಲವರಿದ್ದರು.

ರವಿ ಹಂಜ್, ವಿಶ್ವೇಶ್ವರ ಭಟ್ ವಿರುದ್ಧ ಕ್ರಮಕ್ಕೆ ಬಾಲು ರಾಠೋಡ ಆಗ್ರಹ



ಪಾಂಡವ ನ್ಯೂಸ್, ಗದಗ : ಬಸವಣ್ಣನವರ ಕುರಿತು ಆಧಾರರಹಿತ ಆರೋಪ ಹಾಗೂ ಪ್ರಚೋದನಕಾರಿ ಹೇಳಿಕೆ ನೀಡಿರುವ ರವಿ ಹಂಜ್ ಮತ್ತು ಸಂದರ್ಶನದ ಮೂಲಕ ಅಂತಹ ಹೇಳಿಕೆಗಳಿಗೆ ವೇದಿಕೆ ಕಲ್ಪಿಸಿರುವ ವಿಶ್ವೇಶ್ವರ ಭಟ್ ವಿರುದ್ಧ ಕಾನೂನು ಕ್ರಮ ಕೈಗೊಳ್ಳಬೇಕು ಎಂದು ಸಿಪಿಐ(ಎಂ) ಗದಗ ಜಿಲ್ಲಾ ಕಾರ್ಯದರ್ಶಿ ಬಾಲು ರಾಠೋಡ ಆಗ್ರಹಿಸಿದ್ದಾರೆ.

ರವಿ ಹಂಜ್ ಅವರು ಬಸವಣ್ಣನವರ ಕುರಿತು ಸುಳ್ಳು ಸಂಗತಿಗಳನ್ನು ಪುಸ್ತಕ ರೂಪದಲ್ಲಿ ಪ್ರಕಟಿಸಿರುವುದಲ್ಲದೆ, ಸಂದರ್ಶನದಲ್ಲಿ ಬಸವಣ್ಣನವರನ್ನು ಕೊಲೆಗಾರ, ಮೋಸಗಾರ ಎಂದು ಬಿಂಬಿಸಿರುವುದು ಖಂಡನೀಯ. ಇಂತಹ ಹೇಳಿಕೆಗಳು ಸಮಾಜದ ಶಾಂತಿ, ಸೌಹಾರ್ದಕ್ಕೆ ಧಕ್ಕೆ ತರುವ ಅಪಾಯವಿದೆ ಎಂದು ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಬಸವಣ್ಣನವರ ಸಮಾನತೆ, ಕಾಯಕ, ದಾಸೋಹದ ತತ್ವಗಳನ್ನು ವಿರೋಧಿಸುವ ಉದ್ದೇಶದಿಂದ ವಚನ ಚಳವಳಿಯನ್ನು ಅಪ್ರಸ್ತುತಗೊಳಿಸುವ ಪ್ರಯತ್ನಗಳು ನಡೆಯುತ್ತಿವೆ. ಬಸವಣ್ಣನವರನ್ನು ಕರ್ನಾಟಕದ ಸಾಂಸ್ಕೃತಿಕ ನಾಯಕ ಎಂದು ಘೋಷಿಸಿರುವುದನ್ನು ಸಹಿಸದ ಕೋಮುವಾದಿ ಶಕ್ತಿಗಳು ವಚನ ಸಾಹಿತ್ಯದ ಮೇಲೆ ನಿರಂತರ ದಾಳಿ ನಡೆಸುತ್ತಿವೆ ಎಂದು ಆರೋಪಿಸಿದ್ದಾರೆ.

ಜಾತಿ, ವರ್ಗ, ವರ್ಣ ಹಾಗೂ ಲಿಂಗ ತಾರತಮ್ಯಗಳನ್ನು ತೊಡೆದುಹಾಕಿ ಸಮಸಮಾಜ ನಿರ್ಮಿಸುವ ಆಶಯ ವಚನ ಚಳವಳಿಯದ್ದಾಗಿದೆ. ಆದರೆ, ಮನುಸ್ಮೃತಿಯ ಮೌಲ್ಯಗಳನ್ನು ಹೇರುವ ಉದ್ದೇಶದಿಂದ ಸಂವಿಧಾನ ಮತ್ತು ವಚನ ತತ್ವಗಳನ್ನು ತಿರುಚುವ ಪ್ರಯತ್ನ ನಡೆಯುತ್ತಿದೆ. ಕನ್ನೇರಿ ಸ್ವಾಮಿಯ ಮೂಲಕ ವಚನ ತತ್ವವನ್ನು ಮನುವಾದೀಕರಣಗೊಳಿಸುವ ಪ್ರಯತ್ನ ಹಾಗೂ 'ವಚನ ದರ್ಶನ' ಕೃತಿ ಬಿಡುಗಡೆ ಕಾರ್ಯಕ್ರಮದಲ್ಲಿ ಬಿಜೆಪಿ ಮುಖಂಡರು ಭಾಗವಹಿಸಿರುವುದು ಈ ಬೆಳವಣಿಗೆಗಳಿಗೆ ಪುಷ್ಟಿ ನೀಡಿದೆ ಎಂದು ದೂರಿದ್ದಾರೆ.

ಕರ್ನಾಟಕದ ಶ್ರಮ ಸಂಸ್ಕೃತಿ, ಬಹುಸಾಂಸ್ಕೃತಿಕ ಪರಂಪರೆ ಹಾಗೂ ಜೀವಪರ ಮೌಲ್ಯಗಳ ಪ್ರತೀಕವಾಗಿರುವ ವಚನ ಚಳವಳಿಯ ಆಶಯಗಳನ್ನು ನಾಶಪಡಿಸುವ ಯಾವುದೇ ಪ್ರಯತ್ನವನ್ನು ಸಿಪಿಐ(ಎಂ) ಸಹಿಸುವುದಿಲ್ಲ. ಇಂತಹ ಷಡ್ಯಂತ್ರಗಳನ್ನು ಪಕ್ಷವು ವಿರೋಧಿಸಲಿದೆ ಎಂದು ತಿಳಿಸಿದ್ದಾರೆ.

ಬಸವಣ್ಣನವರ ಹಾಗೂ ವಚನ ತತ್ವದ ವಿರುದ್ಧ ಅಪಪ್ರಚಾರ ನಡೆಸುತ್ತಿರುವವರ ವಿರುದ್ಧ ಸರ್ಕಾರ ಕಠಿಣ ಕ್ರಮ ಕೈಗೊಳ್ಳಬೇಕು. ರವಿ ಹಂಜ್ ಅವರನ್ನು ಬಂಧಿಸಿ ಸೂಕ್ತ ಕಾನೂನು ಕ್ರಮ ಜರುಗಿಸಬೇಕು. ಸಂದರ್ಶನದ ಮೂಲಕ ಪ್ರಚೋದನಕಾರಿ ಹೇಳಿಕೆಗಳಿಗೆ ಅವಕಾಶ ಕಲ್ಪಿಸಿದ ವಿಶ್ವೇಶ್ವರ ಭಟ್ ಅವರ ವಿರುದ್ಧವೂ ಕಾನೂನು ಕ್ರಮ ಕೈಗೊಳ್ಳಬೇಕು ಎಂದು ಬಾಲು ರಾಠೋಡ ಒತ್ತಾಯಿಸಿದ್ದಾರೆ.

ಪಡಿತರ ಅಕ್ಕಿ, ಗೋಧಿ ದಾಸ್ತಾನಿನಲ್ಲಿ ಅಕ್ರಮ ಪತ್ತೆ



ಪಾಂಡವ ನ್ಯೂಸ್, ಗದಗ: ಪಡಿತರ ವಿತರಣೆ ಮತ್ತು ವಿದ್ಯಾರ್ಥಿನಿಲಯಗಳ ನಿರ್ವಹಣೆಯಲ್ಲಿ ಕಂಡುಬಂದಿರುವ ಲೋಪಗಳ ವಿರುದ್ಧ ಕರ್ನಾಟಕ ರಾಜ್ಯ ಆಹಾರ ಆಯೋಗ ಕಠಿಣ ಕ್ರಮಕ್ಕೆ ಮುಂದಾಗಿದೆ. ಆಯೋಗದ ಸದಸ್ಯ ಮಾರುತಿ ದೊಡ್ಡಲಿಂಗಣ್ಣವರ ಅವರು ನ.18 ಮತ್ತು 19ರಂದು ಜಿಲ್ಲೆಯಲ್ಲಿ ನಡೆಸಿದ ಅನಿರೀಕ್ಷಿತ ಪರಿಶೀಲನೆಯಲ್ಲಿ ಪಡಿತರ ದಾಸ್ತಾನಿನ ವ್ಯತ್ಯಾಸ, ಕಳಪೆ ಆಹಾರ ಹಾಗೂ ಅಧಿಕಾರಿಗಳ ಕರ್ತವ್ಯಲೋಪ ಬಯಲಾಗಿದೆ.

ಮುಂಡರಗಿ ಎಪಿಎಂಸಿ ಯಾರ್ಡ್‌ನಲ್ಲಿರುವ ಆಹಾರ ಮತ್ತು ನಾಗರಿಕ ಸರಬರಾಜು ನಿಗಮದ ಸಗಟು ಮಳಿಗೆಯಲ್ಲಿ 94 ಕ್ವಿಂಟಲ್ ಅಕ್ಕಿ, 16.24 ಕ್ವಿಂಟಲ್ ಗೋಧಿ ಹೆಚ್ಚುವರಿಯಾಗಿ ಪತ್ತೆಯಾಗಿದೆ. ತಂತ್ರಾಂಶದಲ್ಲಿ 17.33 ಕ್ವಿಂಟಲ್ ಜೋಳ ಉಳಿಕೆ ಎಂದು ನಮೂದಿಸಿದ್ದರೂ, ಭೌತಿಕವಾಗಿ 134.767 ಕ್ವಿಂಟಲ್ ಜೋಳ ಸಂಗ್ರಹಿಸಿರುವುದು ಕಂಡುಬಂದಿದೆ. ಅಕ್ಕಿ, ಗೋಧಿ ಹಾಗೂ ಜೋಳದಲ್ಲಿ ಹುಳುಗಳು ಕಾಣಿಸಿಕೊಂಡಿದ್ದು, ಸ್ವಚ್ಛತೆ ಮತ್ತು ಸುರಕ್ಷತೆಯಲ್ಲೂ ನಿರ್ಲಕ್ಷ್ಯ ಕಂಡುಬಂದಿದೆ. ಈ ಕುರಿತು ಪೊಲೀಸ್ ದೂರು ದಾಖಲಿಸಲು ಆಹಾರ ನಿರೀಕ್ಷಕ ಚೆನ್ನಪ್ಪ ಗೌಡರ ಅವರಿಗೆ ಸೂಚಿಸಲಾಗಿದೆ.

ಮುಂಡರಗಿಯಲ್ಲಿ ಪರಿಶೀಲನೆ ವೇಳೆ ವಾರ್ಡ್ 3ರ ಅಂಗಡಿ ಸಂಖ್ಯೆ 43, ವಾರ್ಡ್ 4ರ 44 ಹಾಗೂ ವಾರ್ಡ್ 1ರ 41 ನಿಗದಿತ ಸಮಯದಲ್ಲೂ ಮುಚ್ಚಿರುವುದು ಕಂಡುಬಂದಿದೆ. ದೂರವಾಣಿ ಮೂಲಕ ಸೂಚಿಸಿದರೂ ಅಂಗಡಿ ತೆರೆಯದ ಹಿನ್ನೆಲೆಯಲ್ಲಿ ಮೂರೂ ಅಂಗಡಿಗಳ ಲೈಸೆನ್ಸ್ ರದ್ದತಿಗೆ ಸೂಚಿಸಲಾಗಿದೆ.

ಮುಂಡರಗಿ ಸಮಾಜ ಕಲ್ಯಾಣ ಇಲಾಖೆಯ ಹೆಣ್ಣುಮಕ್ಕಳ ವಸತಿನಿಲಯದಲ್ಲಿ ಅನ್ನದಲ್ಲಿ ಹುಳು, ನೀರಿನಂಥ ಸಾರು, ಹಾಲು ಮತ್ತು ತರಕಾರಿ ಕೊರತೆ ಕಂಡುಬಂದಿದೆ. 150 ವಿದ್ಯಾರ್ಥಿನಿಯರಿಗೆ ದಿನಕ್ಕೆ ಕೇವಲ ಒಂದು ಲೀಟರ್ ಹಾಲು ಖರೀದಿಸುತ್ತಿರುವುದು ಪರಿಶೀಲನೆಯಲ್ಲಿ

ಬೆಳಕಿಗೆ ಬಂದಿದೆ. ಸ್ವಚ್ಛತೆ, ಬಿಸಿನೀರು, ಸುರಕ್ಷತಾ ವ್ಯವಸ್ಥೆ ಹಾಗೂ ಲೆಕ್ಕಪತ್ರ ನಿರ್ವಹಣೆಯಲ್ಲೂ ಲೋಪಗಳಿವೆ. ಹಾಜರಿಲ್ಲದ ವಿದ್ಯಾರ್ಥಿನಿಯರನ್ನೂ ಹಾಜರೆಂದು

ರಾಜ್ಯ, ಜಿಲ್ಲಾ ಪ್ರಶಸ್ತಿ ಪುರಸ್ಕೃತ ನಾಲ್ವರು ಸಾಧಕರಿಗೆ ಇಂದು ಸನ್ಮಾನ



ಪಾಂಡವ ನ್ಯೂಸ್, ರಾಣೆಬೆನ್ನೂರು : ಕಲೆ, ಸಾಹಿತ್ಯ, ಜಾನಪದ ಹಾಗೂ ಸಾಂಸ್ಕೃತಿಕ ಕ್ಷೇತ್ರಗಳಲ್ಲಿ ತಮ್ಮದೇ ಆದ ಸಾಧನೆಯ ಮೂಲಕ ಗುರುತಿಸಿಕೊಂಡು ರಾಜ್ಯ ಮತ್ತು ಜಿಲ್ಲಾ ಮಟ್ಟದ ಪ್ರತಿಷ್ಠಿತ ಪ್ರಶಸ್ತಿಗಳಿಗೆ ಭಾಜನರಾದ ನಾಲ್ವರು ಸಾಧಕರಿಗೆ ಕನ್ನಡಪರ, ರೈತಪರ ಹಾಗೂ ಪ್ರಗತಿಪರ ಸಂಘಟನೆಗಳ ವತಿಯಿಂದ ನ.24ರಂದು ಮಂಗಳವಾರ ಬೆಳಗ್ಗೆ 11 ಗಂಟೆಗೆ ನಗರದ ಪ್ರವಾಸಿ ಮಂದಿರದಲ್ಲಿ ನಾಗರಿಕ ಸನ್ಮಾನ ಸಮಾರಂಭ ಆಯೋಜಿಸಲಾಗಿದೆ.

ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತ ವಾಸಣ್ಣ ಕುಸಗೂರು, 2026ನೇ ಸಾಲಿನ ಜಿಲ್ಲಾ ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತ ಪರಶುರಾಮ ಬಣಕಾರ, ಯುವ ಸಾಹಿತಿ ಮಾರುತಿ ತಳವಾರ ಹಾಗೂ ಜಾನಪದ ಕಲಾವಿದ ಶಿವಕುಮಾರ ಜಾಧವ ಅವರನ್ನು ಸಮಾರಂಭದಲ್ಲಿ ಗೌರವಿಸಲಾಗುವುದು.

ಸಾಹಿತ್ಯ ಕ್ಷೇತ್ರಕ್ಕೆ ಕುಸಗೂರು ಕೊಡುಗೆ : ವಾಸಣ್ಣ ಕುಸಗೂರು ಅವರು ಕನ್ನಡ ಸಾಹಿತ್ಯ, ಸಾಂಸ್ಕೃತಿಕ ಹಾಗೂ ಸಂಘಟನಾತ್ಮಕ ಚಟುವಟಿಕೆಗಳಲ್ಲಿ ಸಕ್ರಿಯವಾಗಿ ತೊಡಗಿಸಿಕೊಂಡಿದ್ದಾರೆ.

ತಾಲೂಕು ಕನ್ನಡ ಸಾಹಿತ್ಯ ಪರಿಷತ್ತಿನ ಮಾಜಿ ಅಧ್ಯಕ್ಷರಾಗಿ ಕನ್ನಡ ಭಾಷೆ, ಸಾಹಿತ್ಯ ಮತ್ತು ಸಂಸ್ಕೃತಿಯ ಬೆಳವಣಿಗೆಗೆ ಶ್ರಮಿಸಿದ್ದಾರೆ. ಕನ್ನಡ ಸಾಹಿತ್ಯ ಭವನ ನಿರ್ಮಾಣ ಸೇರಿದಂತೆ ಸಾಹಿತ್ಯಿಕ ಚಟುವಟಿಕೆಗಳಿಗೆ ಉತ್ತೇಜನ ನೀಡುವ ಕಾರ್ಯದಲ್ಲಿ ಪ್ರಮುಖ ಪಾತ್ರ ವಹಿಸಿದ್ದಾರೆ. ಇವರ ಕನ್ನಡಪರ ಸೇವೆಯನ್ನು ಗುರುತಿಸಿ ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ ನೀಡಿ ಗೌರವಿಸಲಾಗಿದೆ.

ಜಾನಪದ ಕಲೆಯಲ್ಲಿ ಬಣಕಾರ ಸಾಧನೆ : ಪರಶುರಾಮ ಬಣಕಾರ ಅವರು ಜಾನಪದ ಕಲೆ ಹಾಗೂ ರಂಗಭೂಮಿ ಕ್ಷೇತ್ರದಲ್ಲಿ ತಮ್ಮ ಪ್ರತಿಭೆಯ ಮೂಲಕ ಗುರುತಿಸಿಕೊಂಡಿದ್ದಾರೆ. ಗ್ರಾಮೀಣ ಕಲಾಪರಂಪರೆಯ ಉಳಿವು ಮತ್ತು ಬೆಳವಣಿಗೆಯಲ್ಲಿ ಆಸಕ್ತಿ ಹೊಂದಿರುವ ಅವರು, ಜನಪದ ಕಲೆಯ ವಿವಿಧ ಆಯಾಮಗಳಲ್ಲಿ ತೊಡಗಿಸಿಕೊಂಡಿದ್ದಾರೆ. ಇವರ ಕಲಾಸೇವೆಯನ್ನು ಗುರುತಿಸಿ 2026ನೇ ಸಾಲಿನ ಜಿಲ್ಲಾ ರಾಜ್ಯೋತ್ಸವ ಪ್ರಶಸ್ತಿ ನೀಡಿ ಗೌರವಿಸಲಾಗಿದೆ.

ಯುವ ಸಾಹಿತ್ಯದ ಆಶಾಕಿರಣ ತಳವಾರ : ಯುವ ಸಾಹಿತಿ ಮಾರುತಿ ತಳವಾರ ಅವರು ಕವನ ಮತ್ತು ಸಾಹಿತ್ಯ ರಚನೆಯ ಮೂಲಕ ಸಾಹಿತ್ಯ ಕ್ಷೇತ್ರದಲ್ಲಿ ಗುರುತಿಸಿಕೊಂಡಿದ್ದಾರೆ. ಇವರ 'ಕ್ರಾಂತಿ ಕಹಳೆ' ಚೊಚ್ಚಲ ಕವನ ಸಂಕಲನ ಸಾಹಿತ್ಯಾಸಕ್ತರ ಗಮನ ಸೆಳೆದಿದೆ. ಸಾಮಾಜಿಕ ಕಳಕಳಿ, ಸಮಕಾಲೀನ ಬದುಕಿನ ಅನುಭವ ಹಾಗೂ ಜನಸಾಮಾನ್ಯರ ಸಮಸ್ಯೆಗಳಿಗೆ ಬರವಣಿಗೆಯ ಮೂಲಕ ಧ್ವನಿಯಾಗುವ ಪ್ರಯತ್ನ ಮಾಡುತ್ತಿದ್ದಾರೆ. ಯುವ ಬರಹಗಾರರಾಗಿ ಸಾಹಿತ್ಯ ಚಟುವಟಿಕೆಗಳಲ್ಲಿ ಸಕ್ರಿಯರಾಗಿದ್ದಾರೆ.

ಜನಜಾಗೃತಿಯ ಕಲಾವಿದ ಜಾಧವ : ರಾಣೆಬೆನ್ನೂರು ತಾಲೂಕಿನ ನದಿಹರಳಹಳ್ಳಿ ಗ್ರಾಮದ ಶಿವಕುಮಾರ ಜಾಧವ ಅವರು ಬೀದಿ ನಾಟಕ ಹಾಗೂ ಜಾನಪದ ಕಲಾವಿದರಾಗಿ ಗುರುತಿಸಿಕೊಂಡಿದ್ದಾರೆ. ಕಲೆಯ ಮೂಲಕ ಸಾಮಾಜಿಕ ಸಂದೇಶಗಳನ್ನು ಜನರಿಗೆ ತಲುಪಿಸುವುದರ ಜತೆಗೆ ಜನಜಾಗೃತಿ ಮೂಡಿಸುವ ಕಾರ್ಯದಲ್ಲಿ ತೊಡಗಿಸಿಕೊಂಡಿದ್ದಾರೆ. ಇವರ ಕಲಾಸೇವೆಯನ್ನು ಗುರುತಿಸಿ ಹಾವೇರಿ ಜಿಲ್ಲಾಡಳಿತ ಜಿಲ್ಲಾ ಕನ್ನಡ ರಾಜ್ಯೋತ್ಸವ ಪ್ರಶಸ್ತಿ ನೀಡಿ ಗೌರವಿಸಿದೆ.

ಪಕ್ಷಭೇದ ಮರೆತು ಪಾಲ್ಗೊಳ್ಳಲು ಮನವಿ : ಸಾಧಕರ ಪರಿಶ್ರಮ, ಪ್ರತಿಭೆ ಹಾಗೂ ಸಮಾಜಕ್ಕೆ ನೀಡಿದ ಕೊಡುಗೆಯನ್ನು ಗುರುತಿಸಿ ಗೌರವಿಸುವ ಉದ್ದೇಶದಿಂದ ಈ ನಾಗರಿಕ ಸನ್ಮಾನ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ. ಸಾಧಕರಿಗೆ ನೀಡುವ ಗೌರವವು ಮುಂದಿನ ಪೀಳಿಗೆಯ ಯುವ ಪ್ರತಿಭೆಗಳಿಗೆ ಪ್ರೇರಣೆಯಾಗಲಿದೆ.

ಆದ್ದರಿಂದ ತಾಲೂಕಿನ ಎಲ್ಲ ರೈತಪರ, ಕನ್ನಡಪರ, ಸ್ತ್ರೀಶಕ್ತಿ ಹಾಗೂ ಪ್ರಗತಿಪರ ಸಂಘಟನೆಗಳ ಪದಾಧಿಕಾರಿಗಳು, ವಿವಿಧ ಸಂಘ-ಸಂಸ್ಥೆಗಳ ಪ್ರತಿನಿಧಿಗಳು ಮತ್ತು ರಾಜಕೀಯ ಪಕ್ಷಗಳ ಮುಖಂಡರು ಪಕ್ಷಭೇದ ಮರೆತು ಹೆಚ್ಚಿನ ಸಂಖ್ಯೆಯಲ್ಲಿ ಪಾಲ್ಗೊಂಡು ಸಾಧಕರನ್ನು ಗೌರವಿಸಬೇಕು ಎಂದು ಸಂಘಟಕರು ಮನವಿ ಮಾಡಿದ್ದಾರೆ.

ಕರ್ನಾಟಕ ರಾಜ್ಯ ರೈತ ಸಂಘಟನೆಯ ರವೀಂದ್ರಗೌಡ ಎಫ್. ಪಾಟೀಲ, ಸ್ವಾಭಿಮಾನಿ ಕರ್ನಾಟಕ ರಕ್ಷಣಾ ವೇದಿಕೆಯ ರಾಜ್ಯಾಧ್ಯಕ್ಷ ನಿತ್ಯಾನಂದ ಕುಂದಾಪುರ, ಹೆಮ್ಮೆಯ ಕನ್ನಡ ಸಂಘಟನೆಯ ರಾಜ್ಯಾಧ್ಯಕ್ಷ ಈರಣ್ಣ ಕೊಂಡಜ್ಜಿ ಹಾಗೂ ರಕ್ಷಣಾ ವೇದಿಕೆಯ ಗಣೇಶ ಗೊಣೆಮ್ಮನವರ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ನ. 29ರಂದು ಭಾಯಾಗಡ್‌ನಲ್ಲಿ ಪದಗ್ರಹಣ ಸಮಾರಂಭ

ಸಂತ ಸೇವಾಲಾಲ್ ಜನ್ಮಸ್ಥಾನ ಮಹಾಮಠಕ್ಕೆ ನೂತನ ಆಡಳಿತ ಮಂಡಳಿ



ಪಾಂಡವ ನ್ಯೂಸ್, ಸೂರಗೊಂಡನಕೊಪ್ಪ/ನ್ಯಾಮತಿ: ಸಂತ ಸೇವಾಲಾಲ್ ಜನ್ಮಸ್ಥಾನ ಮಹಾಮಠ ರಾಜ್ಯ ಸಮಿತಿ (ರಿ.), ಭಾಯಾಗಡ್ ಸಂಸ್ಥೆಯ ನೂತನ ಆಡಳಿತ ಮಂಡಳಿ ರಚನೆಯಾಗಿದ್ದು, ಜಿರಾದ್ ಕ್ಷೇತ್ರದ ಶಾಸಕ ಪ್ರಭು ಬಿ. ಚವ್ಹಾಣ ಅವರ ಅಧ್ಯಕ್ಷತೆಯಲ್ಲಿ ನೂತನ ಪದಾಧಿಕಾರಿಗಳು ಅಧಿಕಾರ ವಹಿಸಿಕೊಳ್ಳಲಿದ್ದಾರೆ.

ಸಂಸ್ಥೆಯ ಆಡಳಿತ ಮಂಡಳಿಗೆ ನಡೆದ ಚುನಾವಣೆಯ ಬಳಿಕ ನೂತನ ಪದಾಧಿಕಾರಿಗಳನ್ನು ಆಯ್ಕೆ ಮಾಡಲಾಗಿದೆ. ಉಪಾಧ್ಯಕ್ಷರಾಗಿ ಭೂಪಾಲನಾಯ್ಕ ಬಿ.ಎಲ್. (ಕೇಂದ್ರ), ಲಕ್ಷ್ಮಣನಾಯ್ಕ ಡಿ.ಎಚ್. (ಉತ್ತರ), ಅನಿಲಕುಮಾರ ಎಸ್. (ದಕ್ಷಿಣ), ಪ್ರಧಾನ ಕಾರ್ಯದರ್ಶಿಯಾಗಿ ಭೋಜ್ಯಾನಾಯ್ಕ, ಖಜಾಂಚಿಯಾಗಿ ಹನುಮನಾಯ್ಕ ಎಲ್. ಆಯ್ಕೆಯಾಗಿದ್ದಾರೆ.

ಜಂಟಿ ಕಾರ್ಯದರ್ಶಿಗಳಾಗಿ ಬಿ.ಎಚ್. ಪುಷ್ಪಾಬಾಯಿ (ಕೇಂದ್ರ), ಅಮರನಾಥ ಪಾಂಡು ಚವ್ಹಾಣ (ಉತ್ತರ), ಮಂಜನಾಯ್ಕ ಜಿ.ಆರ್. (ದಕ್ಷಿಣ) ನೇಮಕಗೊಂಡಿದ್ದಾರೆ.

ನೂತನ ಪದಾಧಿಕಾರಿಗಳ ಪದಗ್ರಹಣ ಸಮಾರಂಭ ನ. 29ರಂದು ಭಾನುವಾರ ಬೆಳಿಗ್ಗೆ 10.30ಕ್ಕೆ ಸಂತ ಸೇವಾಲಾಲ್ ಅವರ ಜನ್ಮಸ್ಥಳ ಭಾಯಾಗಡ್ ಕ್ಷೇತ್ರದಲ್ಲಿ ನಡೆಯಲಿದೆ.

ಸಮಿತಿಯ ನಿಕಟಪೂರ್ವ ಅಧ್ಯಕ್ಷರು ಹಾಗೂ ಕರ್ನಾಟಕ ಸರ್ಕಾರದ ಜವಳಿ ಮತ್ತು ಸಕ್ಕರೆ ಸಚಿವ ರುದ್ರಪ್ಪ ಮಾನಪ್ಪ ಲಮಾಣಿ ಸಮಾರಂಭದ ಅಧ್ಯಕ್ಷತೆ ವಹಿಸಲಿದ್ದಾರೆ. ಧರ್ಮದರ್ಶಿಗಳು, ಪರಿಷತ್ ಅಧ್ಯಕ್ಷರು, ಸದಸ್ಯರು ಹಾಗೂ ಸಮುದಾಯದ ಗಣ್ಯರು ಭಾಗವಹಿಸಲಿದ್ದಾರೆ.

ಭಾಯಾಗಡ್ ಕ್ಷೇತ್ರವು ಸಂತ ಸೇವಾಲಾಲ್ ಅವರ ಪವಿತ್ರ ಜನ್ಮಸ್ಥಳವಾಗಿದ್ದು, ಪ್ರತಿವರ್ಷ ಲಕ್ಷಾಂತರ ಭಕ್ತರು ಭೇಟಿ ನೀಡಿ ದರ್ಶನ ಪಡೆಯುತ್ತಾರೆ. ಹೀಗಾಗಿ ಕ್ಷೇತ್ರದ ಸಮಗ್ರ ಅಭಿವೃದ್ಧಿ, ಭಕ್ತರಿಗೆ ಅಗತ್ಯ ಮೂಲಸೌಕರ್ಯ ಕಲ್ಪಿಸುವುದು ಹಾಗೂ ಧಾರ್ಮಿಕ ಮತ್ತು ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ವ್ಯವಸ್ಥಿತವಾಗಿ ಆಯೋಜಿಸುವುದು ನೂತನ ಆಡಳಿತ ಮಂಡಳಿಯ ಪ್ರಮುಖ ಜವಾಬ್ದಾರಿಯಾಗಿದೆ.

ಕ್ಷೇತ್ರದ ಸ್ವಚ್ಛತೆ, ಅನ್ನದಾಸೋಹ ವ್ಯವಸ್ಥೆ, ಕುಡಿಯುವ ನೀರು, ವಸತಿ ಸೌಲಭ್ಯ ಸೇರಿದಂತೆ ಭಕ್ತರಿಗೆ ಅಗತ್ಯವಿರುವ ಮೂಲಸೌಕರ್ಯಗಳನ್ನು ಸುಧಾರಿಸಲು ನೂತನ ಮಂಡಳಿ ಕ್ರಮ ಕೈಗೊಳ್ಳುವ ಉದ್ದೇಶ ಹೊಂದಿದೆ. ಜತೆಗೆ ಯುವಜನರಲ್ಲಿ ಸಂತ ಸೇವಾಲಾಲ್ ಅವರ ತತ್ವ, ಆದರ್ಶ ಹಾಗೂ ಸೇವಾ ಮನೋಭಾವ ಬೆಳೆಸುವ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲು ಯೋಜಿಸಲಾಗಿದೆ.

ಸಮಾಜದ ಎಲ್ಲ ವರ್ಗಗಳನ್ನು ಒಗ್ಗೂಡಿಸಿ ಕ್ಷೇತ್ರವನ್ನು ಮತ್ತಷ್ಟು ಅಭಿವೃದ್ಧಿಪಡಿಸುವ ಸಂಕಲ್ಪವನ್ನು ನೂತನ ಪದಾಧಿಕಾರಿಗಳು ಹೊಂದಿದ್ದಾರೆ.

ನೂತನ ಆಡಳಿತ ಮಂಡಳಿಯಿಂದ ಕ್ಷೇತ್ರದಲ್ಲಿ ಅಭಿವೃದ್ಧಿ ಕಾರ್ಯಗಳು ವೇಗ ಪಡೆದುಕೊಳ್ಳುವ ನಿರೀಕ್ಷೆಯನ್ನು ಸಮುದಾಯದ ಮುಖಂಡರು ವ್ಯಕ್ತಪಡಿಸಿದ್ದಾರೆ.

ಪದಗ್ರಹಣ ಸಮಾರಂಭಕ್ಕೆ ಸಂಸ್ಥೆಯ ಎಲ್ಲ ಸದಸ್ಯರು, ಸಮುದಾಯದ ಮುಖಂಡರು ಹಾಗೂ ಕ್ಷೇತ್ರದ ಭಕ್ತರು ಆಗಮಿಸಿ ನೂತನ ಪದಾಧಿಕಾರಿಗಳಿಗೆ ಶುಭ ಹಾರೈಸುವಂತೆ ಸಂತ ಸೇವಾಲಾಲ್ ಜನ್ಮಸ್ಥಾನ ಮಹಾಮಠದ ಪ್ರಧಾನ ಕಾರ್ಯದರ್ಶಿ ಭೋಜ್ಯಾನಾಯ್ಕ, ಖಜಾಂಚಿ ಹನುಮನಾಯ್ಕ ಎಲ್., ನಿರ್ವಹಣಾ ಸಮಿತಿಯ ಅಧ್ಯಕ್ಷ ಭೂಪಾಲನಾಯ್ಕ ಬಿ.ಎಲ್. ಹಾಗೂ ಜಂಟಿ ಕಾರ್ಯದರ್ಶಿ ಬಿ.ಎಚ್. ಪುಷ್ಪಾಬಾಯಿ ಪ್ರಕಟಣೆಯಲ್ಲಿ ಮನವಿ ಮಾಡಿದ್ದಾರೆ.

ಪೊಲೀಸ್ ಇಲಾಖೆಯ ಸೇವೆ, ಶಿಸ್ತು ಮತ್ತು ತ್ಯಾಗ ಸಮಾಜಕ್ಕೆ ಮಾದರಿ : ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ ವಸಂತ ರೆಡ್ಡಿ



ಪಾಂಡವ ನ್ಯೂಸ್, ಧಾರವಾಡ : ಸಮಾಜದ ಸುರಕ್ಷತೆಗಾಗಿ ಹಗಲು-ರಾತ್ರಿ ಎನ್ನದೆ ಕರ್ತವ್ಯ ನಿರ್ವಹಿಸುವ ಪೊಲೀಸ್ ಅಧಿಕಾರಿಗಳು ಮತ್ತು ಸಿಬ್ಬಂದಿಗಳ ಸೇವೆ ಅತ್ಯಂತ ಮಹತ್ವದ್ದಾಗಿದೆ. ಸಾರ್ವಜನಿಕರ ಸಮಸ್ಯೆಗಳಿಗೆ ಯಾವುದೇ ಸಮಯದಲ್ಲಿಯೂ ಸ್ಪಂದಿಸುವ ಪೊಲೀಸ್ ಇಲಾಖೆಯ ಸೇವಾ ಮನೋಭಾವ ಸಮಾಜದಲ್ಲಿ ವಿಶ್ವಾಸ ಮತ್ತು ಭದ್ರತೆಯ ಭಾವನೆ ಮೂಡಿಸುತ್ತದೆ ಎಂದು ಐ.ಎಫ್.ಎಸ್ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ ವಸಂತ ರೆಡ್ಡಿ ಅವರು ಹೇಳಿದರು.

ಅವರು ಇಂದು (ನ.23) ಧಾರವಾಡ ಜಿಲ್ಲಾ ಪೊಲೀಸ್ ಡಿಎಆರ್ ಕೇಂದ್ರ ಸ್ಥಾನದ ಕವಾಯತ ಮೈದಾನದಲ್ಲಿ ಪೊಲೀಸ್ ವಾರ್ಷಿಕ ಕ್ರೀಡಾಕೂಟವನ್ನು ಉದ್ಘಾಟಿಸಿ, ಮಾತನಾಡಿದರು.

ಪ್ರತಿದಿನ ಸಮಾಜದ ಸುರಕ್ಷತೆಗಾಗಿ ಶ್ರಮಿಸುವ ಪೊಲೀಸ್ ಅಧಿಕಾರಿಗಳು ಮತ್ತು ಸಿಬ್ಬಂದಿಗಳು ಇಂದು ಆರೋಗ್ಯ, ಸಂತೋಷ ಹಾಗೂ ಪರಸ್ಪರ ಬಾಂಧವ್ಯ ವೃದ್ಧಿಗಾಗಿ ಕ್ರೀಡಾಂಗಣದಲ್ಲಿ ಸೇರಿದ್ದಾರೆ. ಎಲ್ಲ ಅಧಿಕಾರಿಗಳು ಮತ್ತು ಸಿಬ್ಬಂದಿಗಳು ಈ ಅವಕಾಶವನ್ನು ಸದುಪಯೋಗಪಡಿಸಿಕೊಂಡು ಕ್ರೀಡಾಕೂಟದಲ್ಲಿ ಉತ್ಸಾಹದಿಂದ ಪಾಲ್ಗೊಳ್ಳಬೇಕು. ಪೊಲೀಸ್ ಇಲಾಖೆಯ ಪ್ರತಿಯೊಬ್ಬ ಅಧಿಕಾರಿ ಮತ್ತು ಸಿಬ್ಬಂದಿಗಳ ಸೇವೆಗೆ ಗೌರವಪೂರ್ವಕ ನಮನ ಸಲ್ಲಿಸುತ್ತೇನೆ ಎಂದು ಅವರು ತಿಳಿಸಿದರು.

ಪೊಲೀಸ್ ಇಲಾಖೆಯ ಕರ್ತವ್ಯ ಅತ್ಯಂತ ಜವಾಬ್ದಾರಿಯುತವಾದದ್ದು. ಸಾರ್ವಜನಿಕರು ತಮ್ಮ ಸಮಸ್ಯೆಗಳನ್ನು ಹೇಳಿಕೊಳ್ಳಲು ಪೊಲೀಸ್ ಠಾಣೆಗೆ ಬಂದಾಗ ಅವರನ್ನು ಗೌರವದಿಂದ ಮಾತನಾಡಿಸಿ, ಅವರ ಕಷ್ಟಗಳನ್ನು ಆಲಿಸುವ ಕೆಲಸವನ್ನು ಪೊಲೀಸ್ ಅಧಿಕಾರಿಗಳು ಮತ್ತು ಸಿಬ್ಬಂದಿಗಳು ಮಾಡುತ್ತಾರೆ. ಮಧ್ಯರಾತ್ರಿ, ಹಬ್ಬದ ದಿನ ಅಥವಾ ಕುಟುಂಬದೊಂದಿಗೆ ಊಟ ಮಾಡುವ ಸಮಯದಲ್ಲಿಯೂ ತುರ್ತು ಕರೆ ಬಂದರೆ ತಕ್ಷಣ ಸ್ಪಂದಿಸಬೇಕಾಗುತ್ತದೆ. ಇಂತಹ ಕರ್ತವ್ಯ ನಿಷ್ಠೆ ಮತ್ತು ತ್ಯಾಗದ ಮನೋಭಾವ ಪೊಲೀಸ್ ಇಲಾಖೆಯ ವಿಶೇಷತೆಯಾಗಿದೆ. ಇದರಿಂದ ಪ್ರತಿಯೊಬ್ಬ ನಾಗರಿಕನಿಗೂ ಪೊಲೀಸ್ ವ್ಯವಸ್ಥೆ, ಸರ್ಕಾರ ಹಾಗೂ ಸಂವಿಧಾನದ ಮೇಲೆ ವಿಶ್ವಾಸ ಮತ್ತು ಗೌರವ ಮೂಡುತ್ತದೆ ಎಂದು ಅವರು ಹೇಳಿದರು.

ಕರ್ನಾಟಕ ಪೊಲೀಸ್ ಇಲಾಖೆ ಇಡೀ ದೇಶದಲ್ಲಿಯೇ ಮಾದರಿಯಾಗಿ ಕಾರ್ಯನಿರ್ವಹಿಸುತ್ತಿದೆ. ತಂತ್ರಜ್ಞಾನ ಬಳಕೆ, ಸೈಬರ್ ಅಪರಾಧಗಳ ಪತ್ತೆ, ವಿಧಿವಿಜ್ಞಾನ ಹಾಗೂ ಇತ್ತೀಚಿನ ಆರ್ಥಿಕ ಅಪರಾಧಗಳ ತನಿಖೆ ಸೇರಿದಂತೆ ಹಲವು ಕ್ಷೇತ್ರಗಳಲ್ಲಿ ಉತ್ತಮ ಸಾಧನೆ ಮಾಡುತ್ತಿದೆ.

ಅಪಾಯದಲ್ಲಿರುವವರಿಗೆ ಧೈರ್ಯ ತುಂಬುವುದು, ಸಮಾಜಘಾತುಕ ಶಕ್ತಿಗಳು ಪ್ರಚೋದನೆ ನೀಡಿದ ಸಂದರ್ಭದಲ್ಲಿಯೂ ಸಂಯಮದಿಂದ ವರ್ತಿಸುವುದು ಹಾಗೂ ಪ್ರತಿಯೊಬ್ಬರೊಂದಿಗೆ ಮಾನವೀಯತೆ ಮತ್ತು ಸೂಕ್ಷ್ಮತೆಯಿಂದ ನಡೆದುಕೊಳ್ಳುವುದು ಪೊಲೀಸ್ ಇಲಾಖೆಯ ಕರ್ತವ್ಯ ನಿರ್ವಹಣೆಯ ವಿಶೇಷತೆಯಾಗಿದೆ ಎಂದರು.

ಪೊಲೀಸ್ ಇಲಾಖೆಯ ಅಧಿಕಾರಿಗಳು ಮತ್ತು ಸಿಬ್ಬಂದಿಗಳಿಗೆ ದೈಹಿಕ ಸಾಮರ್ಥ್ಯ ಅತ್ಯಂತ ಅವಶ್ಯಕವಾಗಿದೆ. ಕ್ರೀಡೆ ಹಾಗೂ ದೈಹಿಕ ತರಬೇತಿಗಳಿಂದ ಶಿಸ್ತು, ಆತ್ಮವಿಶ್ವಾಸ ಮತ್ತು ಕರ್ತವ್ಯ ನಿರ್ವಹಿಸುವ ಸಾಮರ್ಥ್ಯ ಹೆಚ್ಚುತ್ತದೆ. ಹೈದರಾಬಾದ್‌ನ ರಾಷ್ಟ್ರೀಯ ಪೊಲೀಸ್ ಅಕಾಡೆಮಿಯಲ್ಲಿ ನಡೆಯುವ ದೈಹಿಕ ತರಬೇತಿಯನ್ನು ತಾವು ಖುದ್ದಾಗಿ ವೀಕ್ಷಿಸಿದ್ದು, ಅದರ ಅನುಭವವನ್ನೂ ಪಡೆದಿದ್ದೇನೆ. ಇಂತಹ ತರಬೇತಿಗಳಲ್ಲಿ ಬೆಳೆಸಿಕೊಳ್ಳುವ ಶಿಸ್ತು ಕರ್ತವ್ಯದಲ್ಲಿ ಆತ್ಮವಿಶ್ವಾಸವಾಗಿ ವ್ಯಕ್ತವಾಗುತ್ತದೆ ಎಂದು ಅವರು ತಿಳಿಸಿದರು.

ಪೊಲೀಸ್ ಅಧಿಕಾರಿಗಳು ಮತ್ತು ಸಿಬ್ಬಂದಿಗಳ ಕುಟುಂಬದವರ ತ್ಯಾಗ ಹಾಗೂ ಸಹಕಾರವೂ ಅಭಿನಂದನಾರ್ಹವಾಗಿದೆ. ಯಾವುದೇ ಸಮಯದಲ್ಲಿ ಕರ್ತವ್ಯಕ್ಕೆ ಕರೆ ಬಂದರೂ ಕುಟುಂಬದ ಜವಾಬ್ದಾರಿಯನ್ನು ತಾವು ನಿಭಾಯಿಸುತ್ತೇವೆ ಎಂದು ಹೇಳಿ ಸಿಬ್ಬಂದಿಗಳನ್ನು ಸಮಾಜದ ರಕ್ಷಣೆಯ ಕಾರ್ಯಕ್ಕೆ ಕಳುಹಿಸಿಕೊಡುವವರು ಅವರ ಕುಟುಂಬದ ಸದಸ್ಯರು. ಪೊಲೀಸ್ ಸಿಬ್ಬಂದಿಗಳ ಉತ್ತಮ ಸೇವೆಯ ಹಿಂದೆ ಕುಟುಂಬದವರ ಬೆಂಬಲ ಮತ್ತು ತ್ಯಾಗವೂ ಅಡಗಿದೆ. ಆದ್ದರಿಂದ ಪೊಲೀಸ್ ಕುಟುಂಬದ ಎಲ್ಲ ಸದಸ್ಯರಿಗೂ ಗೌರವಪೂರ್ವಕ ಅಭಿನಂದನೆ ಸಲ್ಲಿಸುತ್ತೇನೆ ಎಂದು ಅವರು ಹೇಳಿದರು.ಅರಣ್ಯ ಅಧಿಕಾರಿಯಾಗಿ ಅರಣ್ಯ ರಕ್ಷಣೆ, ವನ್ಯಜೀವಿಗಳ ಸಂರಕ್ಷಣೆ ಹಾಗೂ ಮಾನವ-ವನ್ಯಜೀವಿಗಳ ನಡುವಿನ ಸಂಘರ್ಷದ ಸಂದರ್ಭಗಳಲ್ಲಿ ಪೊಲೀಸ್ ಇಲಾಖೆಯ ಸಹಕಾರವನ್ನು ಸ್ಮರಿಸುತ್ತೇನೆ. ಅರಣ್ಯ ಇಲಾಖೆಯ ಅಧಿಕಾರಿಗಳು ಮತ್ತು ಸಿಬ್ಬಂದಿಗಳೊಂದಿಗೆ ಪೊಲೀಸ್ ಇಲಾಖೆ ಸದಾ ಸಹಕಾರ ನೀಡುತ್ತಿದ್ದು, ನೈಸರ್ಗಿಕ ಸಂಪನ್ಮೂಲಗಳ ಸಂರಕ್ಷಣೆಯಲ್ಲಿ ಎರಡೂ ಇಲಾಖೆಗಳು ಸಮನ್ವಯದಿಂದ ಕಾರ್ಯನಿರ್ವಹಿಸುತ್ತಿವೆ ಎಂದು ಅವರು ತಿಳಿಸಿದರು.

ಕ್ರೀಡೆ ಎಂದರೆ ಕೇವಲ ಗೆಲುವು ಅಥವಾ ಸೋಲಲ್ಲ. ಅದು ಸ್ಫೂರ್ತಿ, ಸಂಕಲ್ಪ ಮತ್ತು ಉತ್ತಮ ಆರೋಗ್ಯದ ಸಂಕೇತವಾಗಿದೆ. ಸಹೋದ್ಯೋಗಿಗಳೊಂದಿಗೆ ಆತ್ಮೀಯತೆಯಿಂದ ಕ್ರೀಡೆಯಲ್ಲಿ ಪಾಲ್ಗೊಳ್ಳುವುದು ಹಾಗೂ ಸೋಲು-ಗೆಲುವುಗಳನ್ನು ಸಮಾನವಾಗಿ ಸ್ವೀಕರಿಸಿ ಮತ್ತೊಮ್ಮೆ ಪ್ರಯತ್ನಿಸುವ ಉತ್ಸಾಹ ಬೆಳೆಸಿಕೊಳ್ಳುವುದು ಮುಖ್ಯವಾಗಿದೆ ಎಂದರು.

ಕ್ರೀಡಾಕೂಟದಲ್ಲಿ ಭಾಗವಹಿಸಿರುವ ಎಲ್ಲ ಪೊಲೀಸ್ ಅಧಿಕಾರಿಗಳು ಮತ್ತು ಸಿಬ್ಬಂದಿಗಳು ಕ್ರೀಡಾಸ್ಫೂರ್ತಿಯಿಂದ ಪಾಲ್ಗೊಂಡು ಉತ್ತಮ ಪ್ರದರ್ಶನ ನೀಡಬೇಕು. ಮೂರು ದಿನಗಳ ಈ ಕ್ರೀಡಾಕೂಟ ಸುರಕ್ಷಿತವಾಗಿ, ಉತ್ಸಾಹಭರಿತವಾಗಿ ಹಾಗೂ ಯಶಸ್ವಿಯಾಗಿ ನಡೆಯಲಿ ಎಂದು ಅವರು ಹೇಳಿದರು.

ಕಾರ್ಯಕ್ರಮದಲ್ಲಿ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಗುಂಜನ್ ಆರ್ಯ ಅವರು ಸ್ವಾಗತಿಸಿ. ಪ್ರಾಸ್ತಾವಿಕವಾಗಿ ಮಾತನಾಡಿದರು.

ಕಾರ್ಯಕ್ರಮದಲ್ಲಿ ಪೊಲೀಸ್ ವಾರ್ಷಿಕ ಕ್ರೀಡಾಕೂಟಕ್ಕೆ ರಂಜಿತಾ ಆಲಗುಂಡಿ ಅವರು ಕ್ರೀಡಾ ಜ್ಯೋತಿಯೊಂದಿಗೆ ಆಗಮಿಸಿದರು. ಭದ್ರಾ ತಂಡದ ನಾಯಕ ಆರ್‌ಎಸ್‌ಐ ಗಿರೀಶ ಜುಂಜೂರಿ ಅವರು ಕ್ರೀಡಾಪಟುಗಳಿಗೆ ಪ್ರತಿಜ್ಞಾವಿಧಿ ಬೋಧಿಸಿದರು.

ಕಾರ್ಯಕ್ರಮದಲ್ಲಿ ವಾರ್ಷಿಕ ಪೊಲೀಸ್ ಕ್ರೀಡಾಕೂಟದ ಕವಾಯತಿನ ನೇತೃತ್ವವನ್ನು ಆರ್‌ಪಿಐ ಹಾಗೂ ಎಂಟ

ಅಕ್ಕರೆಯು ಗೌರಿಗೆ ಸಕ್ಕರೆಯು ಆರತಿ



ಗೌರಿ ಹುಣ್ಣಿಮೆ ಬಂತೆಂದರೆ ಸಾಕು, ಉತ್ತರ ಕರ್ನಾಟಕದ ಗ್ರಾಮೀಣ ಪ್ರದೇಶಗಳಲ್ಲಿ ಹಬ್ಬದ ಸಂಭ್ರಮ ಮನೆಮಾಡುತ್ತದೆ. ಅದರಲ್ಲೂ ಹೆಣ್ಣುಮಕ್ಕಳ ಉತ್ಸಾಹಕ್ಕೆ ಪಾರವೇ ಇರುವುದಿಲ್ಲ. ಹೊಸ ಸೀರೆ, ಬಣ್ಣಬಣ್ಣದ ಉಡುಪು, ಕೈತುಂಬ ಬಳೆ, ಹೂವಿನಿಂದ ಅಲಂಕೃತವಾದ ಜಡೆ, ಕೈಯಲ್ಲಿ ಸಕ್ಕರೆ ಗೊಂಬೆಗಳ ಆರತಿ ತಟ್ಟೆ... ಹೀಗೆ ಸಿಂಗಾರಗೊಂಡು ಮನೆಮನೆಗೆ ತೆರಳಿ ಗೌರಮ್ಮನಿಗೆ ಆರತಿ ಬೆಳಗುವ ದೃಶ್ಯ ಹಬ್ಬದ ಸೊಬಗನ್ನು ಹೆಚ್ಚಿಸುತ್ತದೆ. ಗೌರಮ್ಮನಿಗೆ ಆರತಿ ಬೆಳಗುವ ನೆಪದಲ್ಲಿ ಸಂಬಂಧಿಕರನ್ನು ಭೇಟಿ ಮಾಡಿ, ಹಿರಿಯರಿಂದ ಆಶೀರ್ವಾದ ಪಡೆದು, ಅಣ್ಣ–ತಮ್ಮಂದಿರಿಂದ ಕಾಣಿಕೆ ಸ್ವೀಕರಿಸುವ ಸಂಭ್ರಮ ಹೆಣ್ಣುಮಕ್ಕಳ ಪಾಲಿಗೆ ವಿಶೇಷ.

ಉತ್ತರ ಕರ್ನಾಟಕದ ಜನಪದ ಸಂಸ್ಕೃತಿಯಲ್ಲಿ ಗೌರಿ ಹುಣ್ಣಿಮೆಗೆ ವಿಶಿಷ್ಟ ಸ್ಥಾನವಿದೆ. ಇದು ಕೇವಲ ದೇವಿಯ ಆರಾಧನೆಯ ಹಬ್ಬವಲ್ಲ. ಹೆಣ್ಣುಮಕ್ಕಳ ಸಂಭ್ರಮ, ಕುಟುಂಬದ ಪ್ರೀತಿ, ಸಂಬಂಧಗಳ ಬೆಸುಗೆ, ಸಕ್ಕರೆ ಗೊಂಬೆಗಳ ಸಾಂಪ್ರದಾಯಿಕ ಕಲೆ ಮತ್ತು ಜನಪದ ಹಾಡುಗಳ ಸೊಗಡನ್ನು ಒಂದೆಡೆ ಸೇರಿಸುವ ಸಾಂಸ್ಕೃತಿಕ ಹಬ್ಬ. ಗೌರಮ್ಮನಿಗೆ ಬೆಳಗುವ ಆರತಿಯ ಬೆಳಕಿನಲ್ಲಿ ಭಕ್ತಿಯ ಭಾವವಿದ್ದರೆ, ಆರತಿ ತಟ್ಟೆಯಲ್ಲಿ ಜೋಡಿಸುವ ಸಕ್ಕರೆ ಗೊಂಬೆಗಳಲ್ಲಿ ಸಿಹಿಯ ಸಂಕೇತವಿದೆ. ಮನೆಮನೆಗೆ ತೆರಳಿ ಆರತಿ ಬೆಳಗುವ ಸಂಪ್ರದಾಯದಲ್ಲಿ ಊರಿನ ಒಗ್ಗಟ್ಟು ಹಾಗೂ ಪರಸ್ಪರ ಪ್ರೀತಿಯ ನಂಟಿದೆ.

ಗೌರಿ ಹುಣ್ಣಿಮೆಯ ಆಚರಣೆಯ ಪ್ರತಿಯೊಂದು ಹಂತವೂ ತನ್ನದೇ ಆದ ಅರ್ಥ ಹೊಂದಿದೆ. ಹಬ್ಬದ ಸಿದ್ಧತೆಯಿಂದ ಹಿಡಿದು ಆರತಿ ಬೆಳಗುವವರೆಗೆ, ಸಕ್ಕರೆ ಗೊಂಬೆಗಳ ಖರೀದಿಯಿಂದ ಸಂಬಂಧಿಕರಿಗೆ ಉಡುಗೊರೆ ನೀಡುವವರೆಗೆ ಎಲ್ಲದರಲ್ಲೂ ಅಕ್ಕರೆ, ಆತ್ಮೀಯತೆ ಮತ್ತು ಸಂಪ್ರದಾಯದ ಸೊಗಡು ಎದ್ದು ಕಾಣುತ್ತದೆ. ಈ ಕಾರಣದಿಂದಲೇ ಗೌರಿ ಹುಣ್ಣಿಮೆ ಉತ್ತರ ಕರ್ನಾಟಕದ ಹೆಣ್ಣುಮಕ್ಕಳ ಸಂಭ್ರಮದ ಹಬ್ಬವಾಗಿ ಮನೆಮನಗಳಲ್ಲಿ ನೆಲೆಸಿದೆ.

ಗೌರಮ್ಮನ ಆರಾಧನೆಗೆ ಸಂಪ್ರದಾಯದ ಮೆರುಗು : ಸೀಗೆ ಹುಣ್ಣಿಮೆಯಲ್ಲಿ ಕೆಲ ಮನೆಗಳಲ್ಲಿ ಶೀಗವ್ವನನ್ನು ಕೂಡಿಸಿ ಪೂಜಿಸುವಂತೆ, ಗೌರಿ ಹುಣ್ಣಿಮೆಯಲ್ಲಿ ಕೆಲವು ಮನೆಗಳಲ್ಲಿ ಗೌರಮ್ಮನನ್ನು ಪ್ರತಿಷ್ಠಾಪಿಸಿ ಆರಾಧಿಸಲಾಗುತ್ತದೆ. ಮಣ್ಣಿನಿಂದ ಗೌರಮ್ಮನ ಮೂರ್ತಿ ತಯಾರಿಸಿ, ಅದಕ್ಕೆ ವಸ್ತ್ರ, ಹೂವು ಹಾಗೂ ಮಂಗಳಕರ ವಸ್ತುಗಳಿಂದ ಅಲಂಕಾರ ಮಾಡಿ ಪೂಜೆ ಸಲ್ಲಿಸುವ ಸಂಪ್ರದಾಯವಿದೆ. ಹೂವಿನ ಅಲಂಕಾರ, ದೀಪದ ಬೆಳಕು ಮತ್ತು ನೈವೇದ್ಯದೊಂದಿಗೆ ಗೌರಮ್ಮನ ಆರಾಧನೆ ನಡೆಯುತ್ತದೆ.

ಊರಿನ ಎಲ್ಲ ಮನೆಗಳಲ್ಲೂ ಗೌರಮ್ಮನ ಮೂರ್ತಿ ಪ್ರತಿಷ್ಠಾಪಿಸುವ ಪದ್ಧತಿ ಇಲ್ಲ. ಕೆಲವು ಮನೆಗಳಲ್ಲಿ ಮಾತ್ರ ಗೌರಮ್ಮನನ್ನು ಕೂಡಿಸಿ ಪೂಜಿಸಲಾಗುತ್ತದೆ. ಹೀಗಾಗಿ ಹಬ್ಬದಂದು ಆ ಮನೆಗಳಿಗೆ ತೆರಳಿ ಆರತಿ ಬೆಳಗುವುದು ಗ್ರಾಮೀಣ ಪ್ರದೇಶಗಳಲ್ಲಿ ವಿಶಿಷ್ಟ ಸಂಪ್ರದಾಯವಾಗಿ ಬೆಳೆದುಬಂದಿದೆ. ಒಂದು ಮನೆಯ ಗೌರಮ್ಮನ ಆರಾಧನೆಯಲ್ಲಿ ಊರಿನ ಹಲವು ಮನೆಗಳ ಹೆಣ್ಣುಮಕ್ಕಳು ಪಾಲ್ಗೊಳ್ಳುವ ಮೂಲಕ ಹಬ್ಬವು ಸಾಮೂಹಿಕ ಸಂಭ್ರಮದ ರೂಪ ಪಡೆಯುತ್ತದೆ.

ಗೌರಮ್ಮನಿಗೆ ಪೂಜೆ ಸಲ್ಲಿಸುವುದರೊಂದಿಗೆ ಕುಟುಂಬದ ಸುಖ, ಶಾಂತಿ ಹಾಗೂ ನೆಮ್ಮದಿಗಾಗಿ ಪ್ರಾರ್ಥಿಸುವುದು ಈ ಆಚರಣೆಯ ಪ್ರಮುಖ ಭಾಗವಾಗಿದೆ. ಮನೆಗಳಲ್ಲಿ ಗೌರಮ್ಮನನ್ನು ಅಲಂಕರಿಸಿ, ಪೂಜಾ ಸಾಮಗ್ರಿಗಳನ್ನು ಸಿದ್ಧಪಡಿಸಿ, ದೀಪ ಹಚ್ಚುವಾಗ ಮನೆಯ ವಾತಾವರಣವೇ ಹಬ್ಬದ ಕಳೆಯಿಂದ ತುಂಬಿರುತ್ತದೆ.

ಹಬ್ಬದ ಸಿದ್ಧತೆಗಳು ಆರಂಭವಾಗುತ್ತಿದ್ದಂತೆ ಮನೆಗಳಲ್ಲಿ ಸ್ವಚ್ಛತೆ, ಅಲಂಕಾರ, ಸಿಹಿ ತಿಂಡಿಗಳ ತಯಾರಿ ಸೇರಿದಂತೆ ಹಲವು ಕೆಲಸಗಳು ಚುರುಕುಗೊಳ್ಳುತ್ತವೆ. ಹೊಸ ಉಡುಪು ಖರೀದಿ, ಆರತಿ ತಟ್ಟೆಯ ಸಿದ್ಧತೆ, ಸಕ್ಕರೆ ಗೊಂಬೆಗಳ ಆಯ್ಕೆ ಹೀಗೆ ಹಬ್ಬದ ಪ್ರತಿಯೊಂದು ಸಿದ್ಧತೆಯಲ್ಲೂ ವಿಶೇಷ ಉತ್ಸಾಹ ಕಾಣುತ್ತದೆ. ಮನೆಯ ಹಿರಿಯ ಮಹಿಳೆಯರು ಸಂಪ್ರದಾಯದ ವಿವರಗಳನ್ನು ಮಕ್ಕಳಿಗೆ ತಿಳಿಸುತ್ತಾರೆ. ಯಾವ ಮನೆಗೆ ಹೋಗಬೇಕು, ಹೇಗೆ ಆರತಿ ಬೆಳಗಬೇಕು, ಯಾವ ಹಾಡುಗಳನ್ನು ಹಾಡಬೇಕು ಎಂಬುದನ್ನು ಪರಿಚಯಿಸುತ್ತಾರೆ.

ಹೀಗೆ ಗೌರಿ ಹುಣ್ಣಿಮೆಯ ಆಚರಣೆ ಒಂದು ಕುಟುಂಬದ ಧಾರ್ಮಿಕ ಕಾರ್ಯಕ್ರಮವಾಗಿ ಆರಂಭವಾಗಿ, ಊರಿನ ಮಹಿಳೆಯರ ಒಗ್ಗಟ್ಟು ಮತ್ತು ಪರಸ್ಪರ ಬಾಂಧವ್ಯವನ್ನು ಬೆಸೆಯುವ ಸಂಭ್ರಮವಾಗಿ ವಿಸ್ತರಿಸುತ್ತದೆ.

ಸಕ್ಕರೆ ಗೊಂಬೆಗಳ ಸಡಗರ : ಗೌರಿ ಹುಣ್ಣಿಮೆ ಎಂದಾಕ್ಷಣ ನೆನಪಿಗೆ ಬರುವ ಪ್ರಮುಖ ಆಕರ್ಷಣೆ ಸಕ್ಕರೆ ಗೊಂಬೆಗಳು. ಸಕ್ಕರೆ ಗೊಂಬೆಗಳಿಲ್ಲದೆ ಹಬ್ಬದ ಆಚರಣೆ ಅಪೂರ್ಣ ಎಂಬ ಭಾವನೆ ಉತ್ತರ ಕರ್ನಾಟಕದ ಜನರಲ್ಲಿ ಬೇರೂರಿದೆ. ಹೀಗಾಗಿ ಹಬ್ಬಕ್ಕೂ ಮೂರ್ನಾಲ್ಕು ವಾರಗಳ ಮೊದಲೇ ಸಕ್ಕರೆ ಗೊಂಬೆಗಳ ತಯಾರಿ ಆರಂಭವಾಗುತ್ತದೆ. ಮನೆಗಳಲ್ಲಿ ಹಬ್ಬದ ಸಿದ್ಧತೆಗಳು ಚುರುಕುಗೊಳ್ಳುತ್ತಿದ್ದಂತೆ ಮಾರುಕಟ್ಟೆಗಳಲ್ಲೂ ಸಕ್ಕರೆ ಗೊಂಬೆಗಳ ಮಾರಾಟ ಜೋರಾಗುತ್ತದೆ.

ಗೌರಿ ಹುಣ್ಣಿಮೆಯ ಸಂದರ್ಭದಲ್ಲಿ ಸಕ್ಕರೆ ಗೊಂಬೆಗಳನ್ನು ಖರೀದಿಸುವುದು ಒಂದು ಸಂಪ್ರದಾಯ ಮಾತ್ರವಲ್ಲ, ಹಬ್ಬದ ಸಂಭ್ರಮದ ಪ್ರಮುಖ ಭಾಗವೂ ಹೌದು. ಮಕ್ಕಳು ತಮ್ಮಿಷ್ಟದ ಗೊಂಬೆಗಳನ್ನು ಆಯ್ಕೆ ಮಾಡಿಕೊಳ್ಳಲು ಉತ್ಸುಕರಾಗಿದ್ದರೆ, ಹಿರಿಯರು ದೇವರ ಆಕೃತಿಗಳು ಹಾಗೂ ಸಾಂಪ್ರದಾಯಿಕ ಗೊಂಬೆಗಳಿಗೆ ಆದ್ಯತೆ ನೀಡುತ್ತಾರೆ. ಒಂದೊಂದು ಗೊಂಬೆಯ ಆಕಾರ, ಬಣ್ಣ ಮತ್ತು ವಿನ್ಯಾಸವೂ ನೋಡುಗರ ಗಮನ ಸೆಳೆಯುತ್ತದೆ.

ಸಕ್ಕರೆಯಿಂದ ತಯಾರಿಸುವ ಈ ಗೊಂಬೆಗಳು ನೋಡಲು ಆಕರ್ಷಕವಾಗಿರುವುದರ ಜೊತೆಗೆ ಹಬ್ಬದ ಆಚರಣೆಯಲ್ಲಿ ಹಲವು ಅರ್ಥಗಳನ್ನು ಹೊಂದಿವೆ. ದೇವತೆಗಳು, ಪುರಾಣದ ಪಾತ್ರಗಳು, ಪಶುಪಕ್ಷಿಗಳು ಹಾಗೂ ಗ್ರಾಮೀಣ ಬದುಕಿನ ವಿವಿಧ ಚಿತ್ರಣಗಳು ಸಕ್ಕರೆಯ ರೂಪದಲ್ಲಿ ಮೂಡಿಬರುತ್ತವೆ. ಸಕ್ಕರೆ ಗೊಂಬೆಗಳ ಮೂಲಕ ಜನಪದ ಕಲಾವಿದರು ತಮ್ಮ ಕಲ್ಪನೆ ಮತ್ತು ಕೈಚಳಕವನ್ನು ಅನಾವರಣಗೊಳಿಸುತ್ತಾರೆ.

ಸಕ್ಕರೆ ಗೊಂಬೆಗಳನ್ನು ಖರೀದಿಸುವಾಗ ಮಕ್ಕಳಲ್ಲಿ ಕಾಣುವ ಕುತೂಹಲ, ಗೊಂಬೆಗಳನ್ನು ಆರತಿ ತಟ್ಟೆಯಲ್ಲಿ ಜೋಡಿಸುವಾಗ ಮಹಿಳೆಯರಲ್ಲಿ



ಮೂಡುವ ಸಂಭ್ರಮ, ಆರತಿ ಬೆಳಗುವಾಗ ಕುಟುಂಬದ ಸದಸ್ಯರಲ್ಲಿ ಮೂಡುವ ಭಕ್ತಿಭಾವ–ಇವೆಲ್ಲವೂ ಗೌರಿ ಹುಣ್ಣಿಮೆಯ ಆಚರಣೆಯನ್ನು ವಿಶೇಷವಾಗಿಸುತ್ತವೆ.

ಮಾರುಕಟ್ಟೆಯಲ್ಲಿ ವಿವಿಧ ಆಕೃತಿಗಳ ಗೊಂಬೆಗಳು ಸಾಲಾಗಿ ಜೋಡಿಸಲ್ಪಟ್ಟಿರುವುದನ್ನು ನೋಡುವುದೇ ಹಬ್ಬದ ಸಡಗರದ ಒಂದು ಭಾಗ. ಮಕ್ಕಳಿಗೆ ಗೊಂಬೆಗಳನ್ನು ಆಯ್ಕೆ ಮಾಡಿಕೊಡುವ ಹಿರಿಯರು, ಯಾವ ಗೊಂಬೆ ಆರತಿ ತಟ್ಟೆಗೆ ಸೂಕ್ತ ಎಂಬುದನ್ನು ಚರ್ಚಿಸುವ ಮಹಿಳೆಯರು, ಗೊಂಬೆಗಳ ಸೌಂದರ್ಯವನ್ನು ಮೆಚ್ಚುವ ಗ್ರಾಹಕರು–ಹೀಗೆ ಸಕ್ಕರೆ ಗೊಂಬೆಗಳ ಸುತ್ತ ಹಬ್ಬದ ಸಂಭ್ರಮ ಗರಿಗೆದರುತ್ತದೆ.

ಗೊಂಬೆಗಳ ತಯಾರಿಕೆಯಲ್ಲಿ ಕಲಾವಿದರ ಕೈಚಳಕ : ಸಕ್ಕರೆ ಗೊಂಬೆಗಳ ತಯಾರಿಕೆ ಒಂದು ವಿಶಿಷ್ಟ ಸಾಂಪ್ರದಾಯಿಕ ಕಲೆ. ಸಕ್ಕರೆಯನ್ನು ನೀರಿನೊಂದಿಗೆ ಬೆರೆಸಿ, ಪಾಕದ ಹದ ಬರುವವರೆಗೆ ಕುದಿಸಲಾಗುತ್ತದೆ. ನಂತರ ಸಿದ್ಧಪಡಿಸಿದ ಮರದ ಅಚ್ಚುಗಳಿಗೆ ಪಾಕವನ್ನು ಸುರಿಯಲಾಗುತ್ತದೆ. ಪಾಕ ಗಟ್ಟಿಯಾದ ಬಳಿಕ ಅಚ್ಚುಗಳನ್ನು ಬಿಡಿಸಿ, ಗೊಂಬೆಗಳನ್ನು ಎಚ್ಚರಿಕೆಯಿಂದ ಹೊರತೆಗೆಯಲಾಗುತ್ತದೆ. ಹೀಗೆ ಸಕ್ಕರೆಯ ಪಾಕದಿಂದ ರೂಪುಗೊಳ್ಳುವ ಗೊಂಬೆಗಳು ವಿವಿಧ ಆಕೃತಿಗಳಲ್ಲಿ ಮೂಡಿಬರುತ್ತವೆ.

ಗೊಂಬೆಗಳ ತಯಾರಿಕೆಯಲ್ಲಿ ಪಾಕದ ಹದ ಬಹಳ ಮುಖ್ಯ. ಪಾಕ ಸರಿಯಾದ ಹದಕ್ಕೆ ಬಂದಾಗ ಮಾತ್ರ ಗೊಂಬೆಗಳು ಸ್ಪಷ್ಟವಾದ ಆಕಾರ ಪಡೆಯುತ್ತವೆ. ಅಚ್ಚುಗಳಿಂದ ಗೊಂಬೆಗಳನ್ನು ಹೊರತೆಗೆಯುವಾಗಲೂ ಎಚ್ಚರಿಕೆ ಅಗತ್ಯ. ಸಣ್ಣ ತಪ್ಪಾದರೂ ಗೊಂಬೆಯ ಆಕಾರ ಹಾಳಾಗುವ ಸಾಧ್ಯತೆ ಇರುತ್ತದೆ. ಹೀಗಾಗಿ ಈ ಕಲೆ ಕೇವಲ ಸಕ್ಕರೆಯನ್ನು ಪಾಕ ಮಾಡುವುದಷ್ಟೇ ಅಲ್ಲ; ಅನುಭವ, ತಾಳ್ಮೆ ಹಾಗೂ ಕೌಶಲವನ್ನೂ ಬೇಡುತ್ತದೆ.

ಶಿವ–ಪಾರ್ವತಿ, ಗಣೇಶ, ಆಂಜನೇಯ, ಬಸವಣ್ಣ, ಆನೆ, ಒಂಟೆ, ರಥ, ಮಂಟಪ, ಅರ್ಜುನನ ಬಿಲ್ಲು, ಗಿಳಿ, ನವಿಲು ಸೇರಿದಂತೆ ವಿವಿಧ ಆಕೃತಿಗಳಲ್ಲಿ ಸಕ್ಕರೆ ಗೊಂಬೆಗಳು ತಯಾರಾಗುತ್ತವೆ. ಪುರಾಣದ ಪಾತ್ರಗಳು, ದೇವತೆಗಳು, ಪ್ರಾಣಿ–ಪಕ್ಷಿಗಳು ಮತ್ತು ಸಾಂಪ್ರದಾಯಿಕ ಬದುಕಿನ ಚಿತ್ರಣಗಳನ್ನು ಸಕ್ಕರೆಯ ಮೂಲಕ ರೂಪಿಸುವುದು ಕಲಾವಿದರ ಸೃಜನಶೀಲತೆಗೆ ಸಾಕ್ಷಿ.

ಪ್ರತಿಯೊಂದು ಗೊಂಬೆಯೂ ಒಂದೊಂದು ಕಥೆ ಅಥವಾ ಭಾವವನ್ನು ಸಂಕೇತಿಸುತ್ತದೆ. ಶಿವ–ಪಾರ್ವತಿಯ ಗೊಂಬೆ ದೈವಿಕತೆಯನ್ನು ಪ್ರತಿನಿಧಿಸಿದರೆ, ಗಣೇಶನ ಗೊಂಬೆ ಶುಭಾರಂಭದ ಸಂಕೇತವಾಗಿ ಕಾಣುತ್ತದೆ. ಬಸವಣ್ಣನ ಗೊಂಬೆ ಭಕ್ತಿ, ಸಮಾನತೆ ಮತ್ತು ಸಾಮಾಜಿಕ ಸಂದೇಶವನ್ನು ನೆನಪಿಸುತ್ತದೆ. ರಥ, ಮಂಟಪದಂತಹ ಆಕೃತಿಗಳು ಪುರಾಣದ ಕಥನ ಹಾಗೂ ಸಾಂಪ್ರದಾಯಿಕ ಬದುಕಿನ ಚಿತ್ರಣವನ್ನು ತೆರೆದಿಡುತ್ತವೆ.

ಆನೆ, ಒಂಟೆ, ಗಿಳಿ, ನವಿಲು ಮೊದಲಾದ ಗೊಂಬೆಗಳು ಮಕ್ಕಳಲ್ಲಿ ಕುತೂಹಲ ಮೂಡಿಸುತ್ತವೆ. ವಿವಿಧ ಬಣ್ಣಗಳ ಅಲಂಕಾರದಿಂದ ಕಂಗೊಳಿಸುವ ಗೊಂಬೆಗಳು ಆರತಿ ತಟ್ಟೆಗೆ ವಿಶೇಷ ಮೆರುಗು ನೀಡುತ್ತವೆ. ಗೊಂಬೆಗಳ ಆಕರ್ಷಕ ವಿನ್ಯಾಸದ ಹಿಂದೆ ಕಲಾವಿದರ ಪರಿಶ್ರಮ ಮತ್ತು ತಲೆಮಾರುಗಳಿಂದ ಬಂದ ಅನುಭವ ಅಡಗಿದೆ.

ಸಕ್ಕರೆ ಗೊಂಬೆಗಳ ತಯಾರಿಕೆಯಲ್ಲಿ ತೊಡಗಿರುವ ಕುಟುಂಬಗಳು ಈ ಕಲೆಯನ್ನು ತಲೆಮಾರುಗಳಿಂದ ಉಳಿಸಿಕೊಂಡು ಬಂದಿವೆ. ಸಾಂಪ್ರದಾಯಿಕ ಅಚ್ಚುಗಳು, ಪಾಕದ ಹದ ಮತ್ತು ಗೊಂಬೆಗಳ ವಿನ್ಯಾಸದ ಕುರಿತು ಹಿರಿಯರಿಂದ ಕಿರಿಯರು ಕಲಿಯುವ ಮೂಲಕ ಈ ಕಲೆ ಮುಂದುವರಿಯುತ್ತಿದೆ. ಹೀಗಾಗಿ ಗೌರಿ ಹುಣ್ಣಿಮೆ ಸಕ್ಕರೆ ಗೊಂಬೆಗಳ ತಯಾರಿಕೆಗೆ ಪ್ರೋತ್ಸಾಹ ನೀಡುವ ಹಬ್ಬವಾಗಿಯೂ ಗುರುತಿಸಿಕೊಂಡಿದೆ.

ಆರತಿ ತಟ್ಟೆಯಲ್ಲಿ ಅಕ್ಕರೆ, ಭಕ್ತಿಯ ಭಾವ : ಗೌರಿ ಹುಣ್ಣಿಮೆಯ ರಾತ್ರಿಯಂದು ಹೆಣ್ಣುಮಕ್ಕಳು ಸಕ್ಕರೆ ಗೊಂಬೆಗಳನ್ನು ಆರತಿ ತಟ್ಟೆಯಲ್ಲಿ ಅಂದವಾಗಿ ಜೋಡಿಸುತ್ತಾರೆ. ತಟ್ಟೆಯಲ್ಲಿ ದೀಪ ಹಚ್ಚಿ, ಗೌರಮ್ಮನಿಗೆ ಆರತಿ ಬೆಳಗುತ್ತಾರೆ. ಹೊಸ ಉಡುಪು ಧರಿಸಿ, ಹೂವು ಮುಡಿದು, ಸಿಂಗಾರಗೊಂಡು ಆರತಿ ತಟ್ಟೆ ಹಿಡಿದು ಹೊರಡುವ ಹೆಣ್ಣುಮಕ್ಕಳ ಸಂಭ್ರಮ ಹಬ್ಬದ ಸೊಬಗನ್ನು ಹೆಚ್ಚಿಸುತ್ತದೆ.

ಆರತಿ ತಟ್ಟೆಯಲ್ಲಿ ಸಕ್ಕರೆ ಗೊಂಬೆಗಳನ್ನು ಜೋಡಿಸುವುದೂ ಒಂದು ಕಲಾತ್ಮಕ ಕೆಲಸ. ಗೊಂಬೆಗಳ ಆಕಾರ, ಬಣ್ಣ ಮತ್ತು ಗಾತ್ರಕ್ಕೆ ತಕ್ಕಂತೆ ಅವುಗಳನ್ನು ಜೋಡಿಸಿ, ದೀಪದ ಬೆಳಕಿನಲ್ಲಿ ಕಂಗೊಳಿಸುವಂತೆ ಅಲಂಕರಿಸಲಾಗುತ್ತದೆ. ಕೆಲವರು ದೇವತೆಗಳ ಗೊಂಬೆಗಳಿಗೆ ವಿಶೇಷ ಸ್ಥಾನ ನೀಡಿದರೆ, ಇನ್ನು ಕೆಲವರು ವಿವಿಧ ಆಕೃತಿಗಳ ಗೊಂಬೆಗಳನ್ನು ಒಟ್ಟಿಗೆ ಜೋಡಿಸಿ ತಟ್ಟೆಯನ್ನು ಸಿಂಗಾರಿಸುತ್ತಾರೆ.

ಗೌರಮ್ಮನಿಗೆ ಆರತಿ ಬೆಳಗಿದ ಬಳಿಕ ಕುಟುಂಬದ ಸದಸ್ಯರು, ನೆರೆಹೊರೆಯವರು ಹಾಗೂ ಸಂಬಂಧಿಕರಿಗೆ ಆರತಿ ಬೆಳಗುವ ಸಂಪ್ರದಾಯವೂ ಇದೆ. ಹೀಗೆ ಮನೆಮನೆಯಲ್ಲೂ ಆರತಿ ಬೆಳಗುವ ಮೂಲಕ ಹಬ್ಬದ ಸಂಭ್ರಮ ಹಂಚಿಕೊಳ್ಳಲಾಗುತ್ತದೆ.

ಗೌರಮ್ಮನನ್ನು ಪ್ರತಿಷ್ಠಾಪಿಸಿದ ಮನೆಗಳಲ್ಲಿ ಮಹಿಳೆಯರು ಮತ್ತು ಹೆಣ್ಣುಮಕ್ಕಳು ಸೇರಿ ಜನಪದ ಹಾಡುಗಳನ್ನು ಹಾಡುತ್ತಾರೆ. ಗೌರಿಯ



ಮಹಿಮೆಯನ್ನು ಸಾರುವ ಹಾಡುಗಳೊಂದಿಗೆ ಆರತಿ ಬೆಳಗುವ ದೃಶ್ಯ ಗ್ರಾಮೀಣ ಸಂಸ್ಕೃತಿಯ ಸೊಗಡನ್ನು ಅನಾವರಣಗೊಳಿಸುತ್ತದೆ. ಹಿರಿಯರು ಹಾಡುವ ಹಾಡುಗಳಿಗೆ ಕಿರಿಯರು ಧ್ವನಿಗೂಡಿಸುತ್ತಾರೆ. ಕೆಲವೆಡೆ ಹಾಡುಗಳ ಮೂಲಕವೇ ಹಬ್ಬದ ಸಂಪ್ರದಾಯಗಳನ್ನು ಮುಂದಿನ ಪೀಳಿಗೆಗೆ ಪರಿಚಯಿಸಲಾಗುತ್ತದೆ.

ಆರತಿ ಬೆಳಗಿದ ಹೆಣ್ಣುಮಕ್ಕಳಿಗೆ ಅಣ್ಣ–ತಮ್ಮಂದಿರು, ಸೋದರಮಾವಂದಿರು ಕಾಣಿಕೆ ನೀಡುವ ಪದ್ಧತಿಯೂ ಇದೆ. ಕೆಲವೆಡೆ ಮಹಿಳೆಯರು ಪರಸ್ಪರ ಅರಿಶಿಣ–ಕುಂಕುಮ ವಿನಿಮಯ ಮಾಡಿಕೊಳ್ಳುತ್ತಾರೆ. ಹಿರಿಯರಿಂದ ಆಶೀರ್ವಾದ ಪಡೆಯುತ್ತಾರೆ. ಈ ಆಚರಣೆಗಳಲ್ಲಿ ಭಕ್ತಿಯ ಜತೆಗೆ ಅಕ್ಕರೆ, ಪ್ರೀತಿ, ಗೌರವ ಹಾಗೂ ಪರಸ್ಪರ ಕಾಳಜಿಯ ಭಾವವೂ ಅಡಕವಾಗಿದೆ.

ಆರತಿ ತಟ್ಟೆಯಲ್ಲಿರುವ ಸಕ್ಕರೆ ಗೊಂಬೆಗಳ ಸಿಹಿಯಂತೆ ಸಂಬಂಧಗಳಲ್ಲೂ ಸಿಹಿ ತುಂಬಲಿ ಎಂಬ ಆಶಯ ಈ ಸಂಪ್ರದಾಯದ ಹಿಂದಿದೆ. ಹೀಗಾಗಿ ಆರತಿ ಬೆಳಗುವುದು ಕೇವಲ ಧಾರ್ಮಿಕ ಆಚರಣೆಯಾಗಿ ಉಳಿಯದೆ, ಕುಟುಂಬದ ಸದಸ್ಯರನ್ನು ಒಂದೆಡೆ ಸೇರಿಸುವ ಸಾಂಸ್ಕೃತಿಕ ಕೊಂಡಿಯಾಗಿದೆ.

ಜನಪದ ಹಾಡುಗಳ ಇಂಪು : ಗೌರಿ ಹುಣ್ಣಿಮೆಯ ಆಚರಣೆಯಲ್ಲಿ ಜನಪದ ಹಾಡುಗಳಿಗೆ ವಿಶೇಷ ಸ್ಥಾನವಿದೆ. ಗೌರಮ್ಮನನ್ನು ಕೂಡಿಸಿ ಪೂಜಿಸುವ ಮನೆಗಳಲ್ಲಿ ಮಹಿಳೆಯರು ಸೇರಿ ಗೌರಿಯ ಮಹಿಮೆಯನ್ನು ಸಾರುವ ಹಾಡುಗಳನ್ನು ಹಾಡುತ್ತಾರೆ. ಈ ಹಾಡುಗಳಲ್ಲಿ ಭಕ್ತಿ, ಕುಟುಂಬದ ಪ್ರೀತಿ, ಹೆಣ್ಣುಮಕ್ಕಳ ಬದುಕು ಹಾಗೂ ಗ್ರಾಮೀಣ ಸಂಸ್ಕೃತಿಯ ಹಲವು ಆಯಾಮಗಳು ಅಡಕವಾಗಿವೆ.

ತಲೆಮಾರುಗಳಿಂದ ಬಾಯಿಂದ ಬಾಯಿಗೆ ಹರಿದು ಬಂದಿರುವ ಜನಪದ ಗೀತೆಗಳು ಹಬ್ಬದ ಆಚರಣೆಗೆ ವಿಶೇಷ ಮೆರುಗು ನೀಡುತ್ತವೆ. ಹಿರಿಯ ಮಹಿಳೆಯರು ಹಾಡುವ ಹಾಡುಗಳನ್ನು ಮಕ್ಕಳು ಕೇಳುತ್ತಾ ಕಲಿಯುತ್ತಾರೆ. ಹೀಗೆ ಹಾಡುಗಳ ಮೂಲಕ ಜನಪದ ಪರಂಪರೆ ಮುಂದಿನ ಪೀಳಿಗೆಗೂ ತಲುಪುತ್ತದೆ.

ಜನಪದ ಹಾಡುಗಳಿಗೆ ಪುಸ್ತಕದ ಪುಟಗಳಿಗಿಂತ ಜನರ ನೆನಪಿನಲ್ಲೇ ಹೆಚ್ಚು ಜೀವವಿದೆ. ಒಂದು ತಲೆಮಾರಿನಿಂದ ಮತ್ತೊಂದು ತಲೆಮಾರಿಗೆ ಸಾಗುವ ಈ ಹಾಡುಗಳು ಗ್ರಾಮೀಣ ಬದುಕಿನ ಅನುಭವ, ಭಾವನೆ ಮತ್ತು ಸಂಸ್ಕೃತಿಯನ್ನು ಹೊತ್ತು ಸಾಗುತ್ತವೆ. ಗೌರಿ ಹುಣ್ಣಿಮೆಯ ಸಂದರ್ಭದಲ್ಲಿ ಅವು ಮತ್ತೆ ಮತ್ತೆ ಮೊಳಗುವ ಮೂಲಕ ಜನಪದ ಪರಂಪರೆಯನ್ನು ಜೀವಂತವಾಗಿರಿಸುತ್ತವೆ.ಹಬ್ಬದಂದು ಮಹಿಳೆಯರು ಒಂದೆಡೆ ಸೇರಿ ಹಾಡುವಾಗ ಪರಸ್ಪರ ಪರಿಚಯ, ಆತ್ಮೀಯತೆ ಮತ್ತು ಸ್ನೇಹ ಮತ್ತಷ್ಟು ಗಟ್ಟಿಯಾಗುತ್ತದೆ. ಕುಟುಂಬದ ಹಿರಿಯರು ಮತ್ತು ಕಿರಿಯರು ಒಂದೇ ವೇದಿಕೆಯಲ್ಲಿ ಪಾಲ್ಗೊಳ್ಳುವ ಈ ಆಚರಣೆ, ತಲೆಮಾರುಗಳ ನಡುವಿನ ಸಾಂಸ್ಕೃತಿಕ ಅಂತರವನ್ನು ಕಡಿಮೆ ಮಾಡುತ್ತದೆ.ಹಿರಿಯರ ಕಂಠದಲ್ಲಿ ಮೊಳಗುವ ಹಾಡುಗಳಿಗೆ ಕಿರಿಯರು ಧ್ವನಿಗೂಡಿಸಿದಾಗ ಹಬ್ಬದ ಸಂಭ್ರಮ ಮತ್ತಷ್ಟು ಹೆಚ್ಚುತ್ತದೆ. ಹಾಡುಗಳ ಮೂಲಕ ಗೌರಮ್ಮನ ಮಹಿಮೆಯನ್ನು ಸ್ಮರಿಸುವುದರ ಜೊತೆಗೆ ಕುಟುಂಬದ ಪ್ರೀತಿ, ಸಂಬಂಧಗಳ ಮಹತ್ವ ಮತ್ತು ಗ್ರಾಮೀಣ ಬದುಕಿನ ಮೌಲ್ಯಗಳೂ ವ್ಯಕ್ತವಾಗುತ್ತವೆ. ಹೀಗಾಗಿ ಜನಪದ ಹಾಡುಗಳು ಗೌರಿ ಹು

ಸ್ವಯಂ ಸೇವಾ ಸಂಸ್ಥೆಗಳಿಗೆ ಹೆಚ್ಚಿನ ಯೋಜನೆ ತರಲು ಪ್ರಯತ್ನ: ಏಕನಾಥ ಮುದಿಗೌಡ್ರ



ಪಾಂಡವ ನ್ಯೂಸ್, ರಾಣೆಬೆನ್ನೂರು : ಜಿಲ್ಲೆಯಲ್ಲಿರುವ ಸ್ವಯಂ ಸೇವಾ ಸಂಸ್ಥೆಗಳು ಉತ್ತಮ ರೀತಿಯಲ್ಲಿ ಕ್ರಿಯಾಶೀಲವಾಗಿ ಕಾರ್ಯನಿರ್ವಹಿಸುತ್ತಿದ್ದು,

ಜಿಲ್ಲೆಗೆ ಹೆಚ್ಚಿನ ಯೋಜನೆಗಳನ್ನು ತರುವ ನಿಟ್ಟಿನಲ್ಲಿ ಫೆವಾರ್ಡ್–ಕೆ ಮೂಲಕ ಪ್ರಯತ್ನಿಸಲಾಗುವುದು ಎಂದು ಕರ್ನಾಟಕ ನಗರ ಮತ್ತು ಗ್ರಾಮಾಭ್ಯುದಯ ಸ್ವಯಂ ಸೇವಾ ಸಂಸ್ಥೆಗಳ ಒಕ್ಕೂಟದ (ಫೆವಾರ್ಡ್–ಹೆಚ್) ಜಿಲ್ಲಾಧ್ಯಕ್ಷ ಏಕನಾಥ ಮುದಿಗೌಡ್ರ ಹೇಳಿದರು. ನಗರದ ರಾಜರಾಜೇಶ್ವರಿ ನಗರದ ತಮ್ಮ ನಿವಾಸದಲ್ಲಿ ನಡೆದ ಫೆವಾರ್ಡ್–ಹೆಚ್ ಹಾವೇರಿ ಜಿಲ್ಲಾ ಮಟ್ಟದ ತುರ್ತು ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ರಾಜ್ಯದಲ್ಲಿಯೇ ಹಾವೇರಿ ಜಿಲ್ಲೆಯ ಒಕ್ಕೂಟ ಪ್ರಬಲವಾಗಿ ಗುರುತಿಸಿಕೊಂಡಿರುವುದು ಹೆಮ್ಮೆಯ ಸಂಗತಿ. ಇದಕ್ಕೆ ಜಿಲ್ಲೆಯ ಎಲ್ಲ ಸ್ವಯಂ ಸೇವಕರು ಹಾಗೂ ಸಂಸ್ಥೆಗಳ ಸಹಕಾರವೇ ಕಾರಣವಾಗಿದೆ.

ಜಿಲ್ಲೆಗೆ ಹೆಚ್ಚಿನ ಯೋಜನೆಗಳನ್ನು ತರುವಂತೆ ರಾಜ್ಯ ಒಕ್ಕೂಟಕ್ಕೆ ಮನವಿ ಸಲ್ಲಿಸಿ ಒತ್ತಾಯಿಸಲಾಗುವುದು. ಎಲ್ಲ ಸಂಸ್ಥೆಗಳಿಗೂ ಸೂಕ್ತ ಅವಕಾಶಗಳು ದೊರೆಯಲಿವೆ. ತಾಳ್ಮೆ ಮತ್ತು ಬದ್ಧತೆಯಿಂದ ಸಮಾಜ ಸೇವೆಯಲ್ಲಿ ತೊಡಗಿಸಿಕೊಳ್ಳಬೇಕು. ಯಾವುದೇ ನಿರ್ಧಾರ ಕೈಗೊಳ್ಳುವ ಮುನ್ನ ಸಭೆಯಲ್ಲಿ ಚರ್ಚಿಸಲಾಗುವುದು. ಸದಸ್ಯರು ನೀಡುವ ಸಲಹೆ–ಸೂಚನೆಗಳನ್ನು ಸ್ವೀಕರಿಸಿ ಒಕ್ಕೂಟವನ್ನು ಮತ್ತಷ್ಟು ಬಲಪಡಿಸೋಣ ಎಂದರು.

ಫೆವಾರ್ಡ್–ಕೆ ರಾಜ್ಯ ಉಪಾಧ್ಯಕ್ಷ ಎಚ್.ಎಫ್. ಅಕ್ಕಿ ಮಾತನಾಡಿ, ರಾಜ್ಯದಲ್ಲಿ ಹಾವೇರಿ ಜಿಲ್ಲೆಯ ಸ್ವಯಂ ಸೇವಾ ಸಂಸ್ಥೆಗಳು ಉತ್ತಮ ಸೇವಾ ಕಾರ್ಯಗಳನ್ನು ಮಾಡುತ್ತಿವೆ. ಇದಕ್ಕಾಗಿ ಎಲ್ಲ ಸಂಸ್ಥೆಗಳಿಗೂ ಅಭಿನಂದನೆಗಳು. ಸ್ವಯಂ ಸೇವಾ ಸಂಸ್ಥೆಗಳು (ಎನ್‌ಜಿಒ) ತಮ್ಮ ಎಲ್ಲ ಅಗತ್ಯ ದಾಖಲೆಗಳನ್ನು ಸಮರ್ಪಕವಾಗಿ ನಿರ್ವಹಣೆ ಮಾಡಿದರೆ ಸರ್ಕಾರದ ವಿವಿಧ ಸೌಲಭ್ಯ ಹಾಗೂ ಯೋಜನೆಗಳನ್ನು ಪಡೆಯಲು ಸಾಧ್ಯವಾಗುತ್ತದೆ. ಸಂಸ್ಥೆಗಳಿಗೆ ಹೆಚ್ಚಿನ ಯೋಜನೆಗಳನ್ನು ಒದಗಿಸಲು ಪ್ರಾಮಾಣಿಕ ಪ್ರಯತ್ನ ಮಾಡಲಾಗುವುದು ಎಂದು ತಿಳಿಸಿದರು.

ಜಿಲ್ಲಾ ಕಾರ್ಯದರ್ಶಿ ಮಂಜುನಾಥ ಸಣ್ಣಿಂಗಣ್ಣಿನವರ ಹಿಂದಿನ ಸಭೆಯ ಚರ್ಚೆಗಳನ್ನು ಓದಿ ತಿಳಿಸಿದರು. ಜಿಲ್ಲೆಯ 45 ಸ್ವಯಂ ಸೇವಾ ಸಂಸ್ಥೆಗಳು ಒಕ್ಕೂಟದ ಸದಸ್ಯತ್ವ ಪಡೆದಿದ್ದು, ರಾಜ್ಯ ಹಾಗೂ ಜಿಲ್ಲಾ ಒಕ್ಕೂಟದ ಮಾಹಿತಿಯನ್ನು ಸದಸ್ಯರಿಗೆ ತಲುಪಿಸುವ ಕಾರ್ಯ ಮಾಡಲಾಗುವುದು. ಒಕ್ಕೂಟದ ಬೆಳವಣಿಗೆಗೆ ಎಲ್ಲರ ಸಹಕಾರ ಅಗತ್ಯವಾಗಿದೆ ಎಂದರು.

ಈ ಸಂದರ್ಭದಲ್ಲಿ ಫೆವಾರ್ಡ್–ಹೆಚ್ ಜಿಲ್ಲಾ ಉಪಾಧ್ಯಕ್ಷ ಕೆ.ಎಸ್. ನಾಗರಾಜ, ಖಜಾಂಚಿ ಸುಶೀಲಾ ಪಾಟೀಲ ಸೇರಿದಂತೆ ಜಿಲ್ಲೆಯ ವಿವಿಧ ಸ್ವಯಂ ಸೇವಾ ಸಂಸ್ಥೆಗಳ ಮುಖ್ಯಸ್ಥರು ಪಾಲ್ಗೊಂಡಿದ್ದರು.

ರಾಜ್ಯಮಟ್ಟದ ಕುಸ್ತಿಯಲ್ಲಿ ಮಾಲತೇಶ ಸರವಂದೆ ಪ್ರಥಮ; ರಾಷ್ಟ್ರಮಟ್ಟಕ್ಕೆ ಆಯ್ಕೆ



ಪಾಂಡವ ನ್ಯೂಸ್, ರಾಣೇಬೆನ್ನೂರು : ಪದವಿಪೂರ್ವ ಶಿಕ್ಷಣ ಇಲಾಖೆಯ 2026–27ನೇ ಸಾಲಿನ ರಾಜ್ಯಮಟ್ಟದ ಕುಸ್ತಿ ಪಂದ್ಯಾವಳಿಯಲ್ಲಿ ರಾಣೇಬೆನ್ನೂರಿನ ಸರ್ಕಾರಿ ಪದವಿಪೂರ್ವ ಕಾಲೇಜಿನ ದ್ವಿತೀಯ ಪಿಯುಸಿ ವಿಜ್ಞಾನ ವಿಭಾಗದ ವಿದ್ಯಾರ್ಥಿ ಮಾಲತೇಶ ವಗ್ರಪ್ಪ ಸರವಂದ ಪ್ರಥಮ ಸ್ಥಾನ ಪಡೆದು ರಾಷ್ಟ್ರಮಟ್ಟದ ಸ್ಪರ್ಧೆಗೆ ಆಯ್ಕೆಯಾಗಿದ್ದಾನೆ.

ಧಾರವಾಡದಲ್ಲಿ ನ. 19ರಿಂದ 21ರವರೆಗೆ ನಡೆದ ರಾಜ್ಯಮಟ್ಟದ ಪದವಿಪೂರ್ವ ಕಾಲೇಜುಗಳ ಕುಸ್ತಿ ಪಂದ್ಯಾವಳಿಯಲ್ಲಿ ಮಾಲತೇಶ ತನ್ನ ಕ್ರೀಡಾ ಕೌಶಲ, ದೈಹಿಕ ಸಾಮರ್ಥ್ಯ ಹಾಗೂ ಆತ್ಮವಿಶ್ವಾಸದ ಮೂಲಕ ಎದುರಾಳಿಗಳನ್ನು ಮಣಿಸಿ ಪ್ರಥಮ ಸ್ಥಾನ ಗಳಿಸಿದ್ದಾನೆ. ಈ ಸಾಧನೆಯೊಂದಿಗೆ ರಾಷ್ಟ್ರಮಟ್ಟದ ಕುಸ್ತಿ ಪಂದ್ಯಾವಳಿಯಲ್ಲಿ ರಾಜ್ಯವನ್ನು ಪ್ರತಿನಿಧಿಸುವ ಅವಕಾಶ ಪಡೆದಿದ್ದಾನೆ.

ಕ್ರೀಡಾ ಕ್ಷೇತ್ರದಲ್ಲಿ ಸಾಧನೆ ಮಾಡಲು ನಿರಂತರ ಅಭ್ಯಾಸ, ಶಿಸ್ತು, ತಾಳ್ಮೆ ಹಾಗೂ ಪರಿಶ್ರಮ ಅಗತ್ಯ. ಈ ಎಲ್ಲ ಗುಣಗಳನ್ನು ಮೈಗೂಡಿಸಿಕೊಂಡಿರುವ ಮಾಲತೇಶ ರಾಜ್ಯಮಟ್ಟದ ಸ್ಪರ್ಧೆಯಲ್ಲಿ ಉತ್ತಮ ಪ್ರದರ್ಶನ ನೀಡುವ ಮೂಲಕ ಕಾಲೇಜಿನ ಹೆಮ್ಮೆಯ ವಿದ್ಯಾರ್ಥಿಯಾಗಿ ಹೊರಹೊಮ್ಮಿದ್ದಾನೆ. ಆತನ ಸಾಧನೆಯಿಂದ ಕಾಲೇಜು, ರಾಣೇಬೆನ್ನೂರು ತಾಲ್ಲೂಕು ಹಾಗೂ ಹಾವೇರಿ ಜಿಲ್ಲೆಗೆ ಗೌರವ ತಂದಂತಾಗಿದೆ.

ಸರ್ಕಾರಿ ಕಾಲೇಜಿನಲ್ಲಿ ವ್ಯಾಸಂಗ ಮಾಡುತ್ತಲೇ ಕ್ರೀಡೆಯಲ್ಲಿ ಆಸಕ್ತಿ ಬೆಳೆಸಿಕೊಂಡು ರಾಜ್ಯಮಟ್ಟದಲ್ಲಿ ಪ್ರಥಮ ಸ್ಥಾನ ಗಳಿಸಿರುವುದು ಇತರ ವಿದ್ಯಾರ್ಥಿಗಳಿಗೂ ಪ್ರೇರಣೆಯಾಗಿದೆ. ಓದಿನ ಜತೆಗೆ ಕ್ರೀಡೆಯಲ್ಲಿಯೂ ತೊಡಗಿಸಿಕೊಂಡು ಸಾಧನೆ ಮಾಡಲು ಸಾಧ್ಯ ಎಂಬುದನ್ನು ಮಾಲತೇಶ ತೋರಿಸಿಕೊಟ್ಟಿದ್ದಾನೆ. ರಾಷ್ಟ್ರಮಟ್ಟಕ್ಕೆ ಆಯ್ಕೆಯಾಗಿರುವುದು ಆತನ ಕ್ರೀಡಾ ಪಯಣದ ಮಹತ್ವದ ಮೈಲಿಗಲ್ಲಾಗಿದ್ದು, ಮುಂದಿನ ಸ್ಪರ್ಧೆಯಲ್ಲಿ ಇನ್ನಷ್ಟು ಉತ್ತಮ ಪ್ರದರ್ಶನ ನೀಡುವ ನಿರೀಕ್ಷೆ ಮೂಡಿಸಿದೆ.

ವಿದ್ಯಾರ್ಥಿಯ ಈ ಸಾಧನೆಗೆ ಶಾಸಕ ಪ್ರಕಾಶ ಕೆ. ಕೋಳಿವಾಡ, ಕಾಲೇಜು ಅಭಿವೃದ್ಧಿ ಸಮಿತಿ ಉಪಾಧ್ಯಕ್ಷ ಪ್ರೊ. ಬಿ.ಬಿ. ನಂದ್ಯಾಲ ಹಾಗೂ ಸಮಿತಿಯ ಸರ್ವ ಸದಸ್ಯರು ಅಭಿನಂದನೆ ಸಲ್ಲಿಸಿದ್ದಾರೆ. ಶಾಲಾ ಶಿಕ್ಷಣ ಇಲಾಖೆ (ಪದವಿಪೂರ್ವ) ಹಾವೇರಿ ಉಪನಿರ್ದೇಶಕ ಮಹಾದೇವಸ್ವಾಮಿ ಅವರು ವಿದ್ಯಾರ್ಥಿಯ ಸಾಧನೆಯನ್ನು ಶ್ಲಾಘಿಸಿ ರಾಷ್ಟ್ರಮಟ್ಟದಲ್ಲಿಯೂ ಯಶಸ್ಸು ಸಾಧಿಸುವಂತೆ ಶುಭ ಹಾರೈಸಿದ್ದಾರೆ. ಕಾಲೇಜಿನ ಪ್ರಾಚಾರ್ಯ ವಿವೇಕಾನಂದ, ಉಪನ್ಯಾಸಕರು ಹಾಗೂ ಬೋಧಕೇತರ ಸಿಬ್ಬಂದಿ ವರ್ಗದವರು ಮಾಲತೇಶನ ಸಾಧನೆಗೆ ಸಂತಸ ವ್ಯಕ್ತಪಡಿಸಿ ಅಭಿನಂದಿಸಿದ್ದಾರೆ. ವಿದ್ಯಾರ್ಥಿಯ ಮುಂದಿನ ಕ್ರೀಡಾ ಬದುಕಿಗೆ ಅಗತ್ಯ ಪ್ರೋತ್ಸಾಹ ಮತ್ತು ಸಹಕಾರ ನೀಡುವುದಾಗಿ ತಿಳಿಸಿದ್ದಾರೆ.

ರಾಷ್ಟ್ರಮಟ್ಟದ ಸ್ಪರ್ಧೆಯಲ್ಲಿಯೂ ಮಾಲತೇಶ ತನ್ನ ಪ್ರತಿಭೆ ಪ್ರದರ್ಶಿಸಿ ಉತ್ತಮ ಸಾಧನೆ ಮಾಡಲಿ. ಆ ಮೂಲಕ ರಾಜ್ಯಕ್ಕೆ ಹಾಗೂ ಕಾಲೇಜಿಗೆ ಮತ್ತಷ್ಟು ಕೀರ್ತಿ ತರಲಿ ಎಂದು ಕಾಲೇಜಿನ ಆಡಳಿತ ಮಂಡಳಿ, ಉಪನ್ಯಾಸಕರು ಮತ್ತು ಸಿಬ್ಬಂದಿ ಹಾರೈಸಿದ್ದಾರೆ.

ಜಾವಿದ್‌ಖಾನ್ ನಗರದಲ್ಲಿ ಶುದ್ಧ ಕುಡಿಯುವ ನೀರಿನ ಘಟಕ ಲೋಕಾರ್ಪಣೆ



ಪಾಂಡವ ನ್ಯೂಸ್, ಹಿರೇಕೆರೂರು : ಪಟ್ಟಣದ ಜಾವಿದ್‌ಖಾನ್ ನಗರದಲ್ಲಿ ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ ಯೋಜನೆಯಡಿ ನಿರ್ಮಿಸಲಾಗಿರುವ ಶುದ್ಧ ಕುಡಿಯುವ ನೀರಿನ ಘಟಕವನ್ನು ಸೋಮವಾರ ಶಾಸಕ ಯು.ಬಿ. ಬಣಕಾರ ಉದ್ಘಾಟಿಸಿದರು.

ಸ್ಥಳೀಯ ನಿವಾಸಿಗಳಿಗೆ ಶುದ್ಧ ಕುಡಿಯುವ ನೀರು ಒದಗಿಸುವ ಉದ್ದೇಶದಿಂದ ಈ ಘಟಕವನ್ನು ಸ್ಥಾಪಿಸಲಾಗಿದೆ. ಕುಡಿಯುವ ನೀರು ಪ್ರತಿಯೊಬ್ಬರ ಮೂಲಭೂತ ಅವಶ್ಯಕತೆಯಾಗಿದ್ದು, ಸಾರ್ವಜನಿಕರ ಆರೋಗ್ಯದ ದೃಷ್ಟಿಯಿಂದ ಶುದ್ಧ ನೀರಿನ ಲಭ್ಯತೆ ಅತ್ಯಂತ ಮಹತ್ವದ್ದಾಗಿದೆ. ಈ ಘಟಕದಿಂದ ಬಡಾವಣೆಯ ನಿವಾಸಿಗಳಿಗೆ ಅನುಕೂಲವಾಗಲಿದ್ದು, ಸಾರ್ವಜನಿಕರು ಇದರ ಸದುಪಯೋಗ ಪಡೆದುಕೊಳ್ಳಬೇಕು ಎಂದು ತಿಳಿಸಲಾಯಿತು.

ಸರ್ಕಾರದ ವಿವಿಧ ಯೋಜನೆಗಳ ಮೂಲಕ ಜನರಿಗೆ ಅಗತ್ಯ ಮೂಲಸೌಕರ್ಯ ಕಲ್ಪಿಸುವ ಪ್ರಯತ್ನ ನಡೆಯುತ್ತಿದೆ. ಅದರಂತೆ ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ ಯೋಜನೆಯಡಿ ನಿರ್ಮಿಸಿರುವ ಈ ಘಟಕ ಸ್ಥಳೀಯರ ಕುಡಿಯುವ ನೀರಿನ ಸಮಸ್ಯೆಗೆ ಪರಿಹಾರ ಕಲ್ಪಿಸುವಲ್ಲಿ ಸಹಕಾರಿಯಾಗಲಿದೆ.

ಈ ಸಂದರ್ಭದಲ್ಲಿ ಮಲ್ಲಿಕಾರ್ಜುನ ಬುರುಡಿಕಟ್ಟಿ, ಶಂಭು ಹಂಸಭಾವಿ, ಅಬ್ದುಲ್ ಹಕ್ ಮುಲ್ಲಾ, ಸುಧಾ ಚಂದಿ, ಮುಬಾರಕ್ ಮಾಕಂದಾರ್, ರಜೀಯಾ ಅಸದಿ, ಶಂಶಾದ್ ಕುಪ್ಪೇಲೂರು, ಕವಿತಾ ಹಾರ್ನಳ್ಳಿ, ಹುಸೇನ್ ಮಾಸೂರು, ಫಾರೂಕ್ ಮೇಸ್ತ್ರಿ, ರಿಯಾಜ್ ಮುಲ್ಲಾ, ಇಬ್ರಾಹಿಂ ಸವಣೂರು, ಅಪ್ಪೋಜ್ ಮುಲ್ಲಾ ಸೇರಿದಂತೆ ಸ್ಥಳೀಯ ಮುಖಂಡರು ಹಾಗೂ ಸಾರ್ವಜನಿಕರು ಉಪಸ್ಥಿತರಿದ್ದರು.

ರಾಣೇಬೆನ್ನೂರಿನಲ್ಲಿ ಕನ್ನಡದ ಸಂಭ್ರಮಕ್ಕೆ ಸಾಂಸ್ಕೃತಿಕ ಮೆರುಗು



ಪಾಂಡವ ನ್ಯೂಸ್, ರಾಣೇಬೆನ್ನೂರು : ಸ್ವಾಭಿಮಾನಿ ಕರ್ನಾಟಕ ರಕ್ಷಣಾ ವೇದಿಕೆ ವತಿಯಿಂದ 71ನೇ ಕರ್ನಾಟಕ ರಾಜ್ಯೋತ್ಸವದ ಅಂಗವಾಗಿ ನಗರದ ಕನ್ನಡ ಸಾಹಿತ್ಯ ಪರಿಷತ್ ಭವನದಲ್ಲಿ ಸಾಂಸ್ಕೃತಿಕ ಹಾಗೂ ಸಂಗೀತ ಕಾರ್ಯಕ್ರಮವನ್ನು ಅದ್ದೂರಿಯಾಗಿ ಆಚರಿಸಲಾಯಿತು.

ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತ ವಾಸಣ್ಣ ಕುಸುಗೂರು ಅವರು ಕಾರ್ಯಕ್ರಮ ಉದ್ಘಾಟಿಸಿ ಚಾಲನೆ ನೀಡಿದರು. ಕನ್ನಡ ನಾಡು, ನುಡಿ, ಸಂಸ್ಕೃತಿಯ ಹಿರಿಮೆ ಸಾರುವ ಕಾರ್ಯಕ್ರಮದಲ್ಲಿ ಕನ್ನಡಾಭಿಮಾನಿಗಳು ಪಾಲ್ಗೊಂಡು ಸಂಭ್ರಮಿಸಿದರು.ಮುಖ್ಯ ಅತಿಥಿಗಳಾಗಿ ಡಾ. ಬಸವರಾಜ ಕೆಲಗಾರ್, ಡಾ. ಪ್ರವೀಣ್ ಕನ್ನೂರು, ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಪ್ರಭಾಕರ ಶೀಗ್ಲಿ, ಮಾಜಿ ಅಧ್ಯಕ್ಷೆ ಎ.ಬಿ. ರತ್ನಮ್ಮ, ಜಗದೀಶ ಮಳ್ಳಿಮಠ, ಸ್ವಾಭಿಮಾನಿ ಕರವೇಯ ನಿತ್ಯಾನಂದ ಜಿ. ಕುಂದಾಪುರ, ಚಂದ್ರಪ್ಪ ಬಣಕಾರ, ಮುತ್ತಣ್ಣ ಕರೆಹೆಜ್ಜಿ, ರಿಯಾಜ್ ಅಹ್ಮದ್, ಮಲ್ಲಿಕಾರ್ಜುನ ಸಾವಕಳುವರ, ಪರಶುರಾಮ ಕುರುವತ್ತಿ, ರಘು ಕೋಳಿವಾಡ, ಚಂದ್ರು ಹಳ್ಳಪ್ಪನವರ, ಬಸವರಾಜು, ನಿಂಗಣ್ಣ ದೇವರಗುಡ್ಡ, ಆನಂದ ಲವಣಿ, ಕೃಷ್ಣ ವೇಶಗರ, ಮೌನೇಶ ಕಬ್ಬಾರ್, ಅಣ್ಣಪ್ಪ ಚಲವಾದಿ ಹಾಗೂ ಕೊಟ್ರೇಶಪ್ಪ ಎಮ್ಮಿ ಸೇರಿದಂತೆ ಹಲವರು ಉಪಸ್ಥಿತರಿದ್ದರು.

ಕಲಾವಿದರಾದ ಪ್ರಕಾಶ ಗಚ್ಚಿನಮಠ ಮತ್ತು ಬಸವರಾಜ ಸಾವಕನವರ ಸೇರಿದಂತೆ ಕಲಾವಿದರು ಸಂಗೀತ ಹಾಗೂ ಸಾಂಸ್ಕೃತಿಕ ಕಾರ್ಯಕ್ರಮಗಳ ಮೂಲಕ ಸಭಿಕರನ್ನು ರಂಜಿಸಿದರು. ಕನ್ನಡದ ನೆಲ, ಜಲ, ಭಾಷೆ ಹಾಗೂ ಸಂಸ್ಕೃತಿಯ ಮಹತ್ವ ಸಾರುವ ಮೂಲಕ ರಾಜ್ಯೋತ್ಸವದ ಸಂಭ್ರಮವನ್ನು ಹಂಚಿಕೊಳ್ಳಲಾಯಿತು.

ದೇಸಿ ಶಿಕ್ಷಣ ಪದ್ಧತಿ ಅಳವಡಿಸಿಕೊಳ್ಳಿ

ಪಾಂಡವ ನ್ಯೂಸ್, ರಾಣೆಬೆನ್ನೂರು : ಭಾರತೀಯ ಜ್ಞಾನ ಪರಂಪರೆ, ಸಂಸ್ಕೃತಿ, ಸಂಸ್ಕಾರ ಹಾಗೂ ಮೌಲ್ಯಗಳನ್ನು ಇಂದಿನ ಶಿಕ್ಷಣ ವ್ಯವಸ್ಥೆಯಲ್ಲಿ ಅಳವಡಿಸಿಕೊಳ್ಳುವ ಮೂಲಕ ಶಿಕ್ಷಣವನ್ನು ಅರ್ಥಪೂರ್ಣಗೊಳಿಸಬೇಕು ಎಂದು ರಾಷ್ಟ್ರೀಯ ಸ್ವಯಂಸೇವಕ ಸಂಘದ ಕರ್ನಾಟಕ ಉತ್ತರ ಪ್ರಾಂತ ಕಾರ್ಯಕಾರಿಣಿ ಸದಸ್ಯ ರವೀಂದ್ರ ಹೇಳಿದರು.ನಗರದಲ್ಲಿ ಬೆಂಗಳೂರಿನ ರಾಷ್ಟ್ರೋತ್ಥಾನ ಪರಿಷತ್ ಹಾಗೂ ಶಿಕ್ಷಣ ಭಾರತಿ (ಶಿಕ್ಷಕರ ಶಿಕ್ಷಣ ಪ್ರಬಲ) ಹಾವೇರಿ ಜಿಲ್ಲಾ ಘಟಕದಿಂದ ನಡೆದ ಶಿಕ್ಷಕರ ಸಮಾವೇಶದಲ್ಲಿ ಅವರು ಮಾತನಾಡಿದರು.ಭಾರತವು ಪ್ರಾಚೀನ ಕಾಲದಿಂದಲೂ ಜ್ಞಾನ, ವಿಜ್ಞಾನ, ಕಲೆ, ಸಂಸ್ಕೃತಿ ಹಾಗೂ ಶಿಕ್ಷಣ ಕ್ಷೇತ್ರಗಳಲ್ಲಿ ವಿಶ್ವಕ್ಕೆ ಮಾರ್ಗದರ್ಶನ ನೀಡಿದೆ. ಭಾರತೀಯ ಶಿಕ್ಷಣ ವ್ಯವಸ್ಥೆಯಲ್ಲಿ ಜ್ಞಾನ ಪರಂಪರೆ, ಮೌಲ್ಯಗಳು, ಸಂಸ್ಕಾರ ಹಾಗೂ ಜೀವನದರ್ಶನಕ್ಕೆ ಮಹತ್ವದ ಸ್ಥಾನವಿದೆ. ಭಾರತೀಯ ಶಿಕ್ಷಣದ ಮೂಲ ಆಶಯಗಳನ್ನು ಇಂದಿನ ಪೀಳಿಗೆಗೆ ತಲುಪಿಸುವ ಜವಾಬ್ದಾರಿ ಶಿಕ್ಷಕರ ಮೇಲಿದೆ ಎಂದರು.ನಮ್ಮ ಗುರುಕುಲ ಶಿಕ್ಷಣ ಪದ್ಧತಿ ಕೇವಲ ಅಕ್ಷರ ಜ್ಞಾನಕ್ಕೆ ಸೀಮಿತವಾಗಿರದೆ, ವೈಜ್ಞಾನಿಕ ಹಾಗೂ ಸಮಗ್ರ ಶಿಕ್ಷಣಕ್ಕೆ ಆದ್ಯತೆ ನೀಡುತ್ತಿತ್ತು. ಆದರೆ ಪಾಶ್ಚಾತ್ಯ ಶಿಕ್ಷಣ ಪದ್ಧತಿಯ ಪ್ರಭಾವದಿಂದ ಭಾರತೀಯ ಶಿಕ್ಷಣದ ಮೂಲ ಆಶಯಗಳು ಹಿಂದೆ ಸರಿದಿವೆ. ಈ ಹಿನ್ನೆಲೆಯಲ್ಲಿ ಶಿಕ್ಷಕರು ಕೇವಲ ಪಠ್ಯಪುಸ್ತಕದ ಜ್ಞಾನ ಬೋಧಿಸುವುದಕ್ಕೆ ಸೀಮಿತವಾಗದೆ, ಭಾರತೀಯ ಚಿಂತನೆ ಹಾಗೂ ಜ್ಞಾನ ಪರಂಪರೆಯನ್ನು ಶಿಕ್ಷಣದಲ್ಲಿ ಅಳವಡಿಸಿಕೊಳ್ಳುವ ಪ್ರಯತ್ನ ಮಾಡಬೇಕು ಎಂದು ತಿಳಿಸಿದರು.ರಾಷ್ಟ್ರೋತ್ಥಾನ ಪರಿಷತ್ ಕಳೆದ 60 ವರ್ಷಗಳಿಂದ ನಿರಂತರವಾಗಿ ರಾಷ್ಟ್ರೀಯ ಚಿಂತನೆ, ಭಾರತೀಯ ಸಂಸ್ಕೃತಿ ಹಾಗೂ ಸಾಮಾಜಿಕ ಮೌಲ್ಯಗಳನ್ನು ಆಧಾರವಾಗಿಟ್ಟುಕೊಂಡು ವಿವಿಧ ಕ್ಷೇತ್ರಗಳಲ್ಲಿ ಮಹತ್ವದ ಕಾರ್ಯಗಳನ್ನು ಮಾಡುತ್ತಿದೆ. ಶಿಕ್ಷಣ ಭಾರತಿ ಶಿಕ್ಷಕರ ಕ್ಷೇತ್ರದಲ್ಲಿ ಸೃಜನಾತ್ಮಕ ಹಾಗೂ ಮೌಲ್ಯಾಧಾರಿತ ಕಾರ್ಯಕ್ರಮಗಳನ್ನು ಹಮ್ಮಿಕೊಂಡು ಶಿಕ್ಷಕರಿಗೆ ಸತತ ಮಾರ್ಗದರ್ಶನ ನೀಡುತ್ತಿದೆ. ಇಂತಹ ಸಂಘಟನಾತ್ಮಕ ಪ್ರಯತ್ನಗಳು ಶಿಕ್ಷಣ ಕ್ಷೇತ್ರಕ್ಕೆ ಬಲ ನೀಡಲಿವೆ ಎಂದರು.

ಮಕ್ಕಳ ಭವಿಷ್ಯ ರೂಪಿಸುವ ಶಕ್ತಿ : ಕ್ಷೇತ್ರ ಶಿಕ್ಷಣಾಧಿಕಾರಿ ಶ್ಯಾಮಸುಂದರ ಅಡಿಗ ಮಾತನಾಡಿ, ಇಂದಿನ ಶಿಕ್ಷಣವು ಮುಂದಿನ ಪೀಳಿಗೆಯ ಭವಿಷ್ಯ ರೂಪಿಸುವ ಶಕ್ತಿ ಹೊಂದಿರಬೇಕು. ಶಿಕ್ಷಣವೆಂದರೆ ಕೇವಲ ಅಂಕಗಳಿಕೆ, ಪದವಿ ಹಾಗೂ ಉದ್ಯೋಗ ಪಡೆಯುವುದಷ್ಟೇ ಅಲ್ಲ. ಅದು ವ್ಯಕ್ತಿಯ ದೈಹಿಕ, ಮಾನಸಿಕ, ಬೌದ್ಧಿಕ, ಭಾವನಾತ್ಮಕ ಹಾಗೂ ಆಧ್ಯಾತ್ಮಿಕ ವಿಕಸನಕ್ಕೆ ಪೂರಕವಾಗಿರಬೇಕು ಎಂದರು. ತಾಲೂಕು ಸಂಘಚಾಲಕ ಭಾರತಿ ಅಧ್ಯಕ್ಷತೆ ವಹಿಸಿದ್ದರು. ಜಿಲ್ಲಾ ಸಹ ಸಂಘಚಾಲಕ ಡಾ. ಮುತ್ತುರಾಜಯ್ಯ ಎಂ.ಎಂ., ಸಂಯೋಜಕ ರಾಮಪ್ರಸಾದ್ ಪಿ., ಡಾ. ಬಸವರಾಜ ಕಲೇಗಾರ, ದೀಪಾ,ಸೇರಿದಂತೆ ವಿವಿಧ ಪದಾಧಿಕಾರಿಗಳು, ಕಾರ್ಯಕರ್ತರು ಹಾಗೂ ಜಿಲ್ಲೆಯ ವಿವಿಧ ಶಾಲೆಗಳ ಶಿಕ್ಷಕರು ಉಪಸ್ಥಿತರಿದ್ದರು.

ಗ್ರಾಮೀಣರ ಸಮಸ್ಯೆಗಳಿಗೆ ಸ್ಥಳದಲ್ಲೇ ಸ್ಪಂದಿಸಿದ ಶಾಸಕ ಮಾನೆ



ಪಾಂಡವ ನ್ಯೂಸ್, ಹಾನಗಲ್ : ಹಕ್ಕುಪತ್ರ ವಿತರಣೆಯಿಂದ ವಂಚಿತ ಕುಟುಂಬಗಳು, ಕಾರ್ಮಿಕರಿಗೆ ಸಿಗದ ಸರ್ಕಾರಿ ಸೌಲಭ್ಯ, ಸಮರ್ಪಕ ಕುಡಿಯುವ ನೀರಿನ ಪೂರೈಕೆ, ಇ–ಸ್ವತ್ತು ವಿತರಣೆಯ ವಿಳಂಬ ಹಾಗೂ ವಸತಿ ಸೌಲಭ್ಯ ಸೇರಿದಂತೆ ಹಲವು ಸಾರ್ವಜನಿಕ ಸಮಸ್ಯೆಗಳಿಗೆ ಶಾಸಕ ಹಾಗೂ ಕರ್ನಾಟಕ ಗೃಹ ಮಂಡಳಿ ಅಧ್ಯಕ್ಷ ಶ್ರೀನಿವಾಸ ಮಾನೆ ಅವರು ಸ್ಥಳದಲ್ಲೇ ಸ್ಪಂದಿಸಿದರು.

ತಾಲ್ಲೂಕಿನ ಸಮಶಗಿ ಗ್ರಾಮದಲ್ಲಿ ನಡೆದ ಗ್ರಾಮ ಪಂಚಾಯಿತಿ ಮಟ್ಟದ ಪ್ರಜಾಸೇವೆ ಆಂದೋಲನದಲ್ಲಿ ಗ್ರಾಮಸ್ಥರು ವಿವಿಧ ಸಮಸ್ಯೆಗಳನ್ನು ಶಾಸಕರ ಗಮನಕ್ಕೆ ತಂದರು. ಗ್ರಾಮಸ್ಥರ ಅಹವಾಲು ಆಲಿಸಿದ ಶ್ರೀನಿವಾಸ ಮಾನೆ, ಸಂಬಂಧಿಸಿದ ಇಲಾಖೆಗಳ ಅಧಿಕಾರಿಗಳೊಂದಿಗೆ ಸ್ಥಳದಲ್ಲೇ ಚರ್ಚಿಸಿ ಸಮಸ್ಯೆಗಳ ಪರಿಹಾರಕ್ಕೆ ಕ್ರಮ ಕೈಗೊಂಡರು.

ಹಕ್ಕುಪತ್ರ ವಿತರಣೆಗೆ ಕ್ರಮ : ಕಂದಾಯ ಗ್ರಾಮ ಹಾಗೂ ಉಪಗ್ರಾಮಗಳ ವ್ಯಾಪ್ತಿಯಲ್ಲಿ ಮನೆಗಳ ಹಕ